# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 194 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 04.02.2025 • ಮಂಗಳವಾರ • ಪುಟ:04 • ಬೆಲೆ:2
Volume:02 • Issue: 194 • PRGI No:KARKAN/2023/88055 • VIJAYANAGARA • 04.02.2025 • Tuesday • Page:04 • Rs:2



ಓದುಗರ ಬೆರಳ ತುದಿಗೆ ನಿಮ್ಮ ಬ್ರಾಂಡ್, ನಿಮ್ಮ ವ್ಯವಹಾರ, ಸೇವೆ/ವಿಶೇಷ ಕೊಡುಗೆಗಳನ್ನು ಹಂಪಿ ಟೈಮ್ಸ್ ಮೂಲಕ ಹೆಚ್ಚು ಓದುಗರಿಗೆ ತಲುಪಿಸಿ.



1,10,000+
Digital E-PAPER READERS

No.1 HAMPI TIMES LEADING VIJAYANAGARA District News Paper

Contact for Advertisements: 9448633038


## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ


-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ


## ಮನೆ ಬಾಡಿಗೆಗೆ ಇದೆ

ಹೊಸಪೇಟೆಯ ವಿವೇಕಾನಂದನಗರದಲ್ಲಿ ಶ್ರೀನಿವಾಸ ಅಪಾರ್ಟ್‌ಮೆಂಟ್ ಎದುರುಗಡೆ, ಸಮರ್ಪಕ (ಸಿಹಿ & ಬೋರ್‌ವೆಲ್) ನೀರಿನ ಸೌಲಭ್ಯ ಇರುವ ಡಬಲ್ ಬೆಡ್‌ರೂಂ ಮನೆ ಬಾಡಿಗೆಗೆ ಇದೆ. ಆಸಕ್ತರು ನೇರವಾಗಿ ಸಂಪರ್ಕಿಸಿ

M: 9909978170
M: 9448867485


## ಆನಂದ ಬಾಣ




# ರಥೋತ್ಸವ ಅಂಗಳಕ್ಕೆ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿ ತೇರುಗಡ್ಡೆ

## ನಿಯಂತ್ರಣಕ್ಕೆ ಸಿಗದ ತೇರುಗಡ್ಡೆ | ದ್ವಿಚಕ್ರವಾಹನ ಜಖಂ

■ ಹಂಪಿ ಟೈಮ್ಸ್ ಕೊಟ್ಟೂರು

ಪಟ್ಟಣದ ಆರಾಧ್ಯ ದೇವರು ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿ ರಥೋತ್ಸವ ಫೆ.22 ರಂದು ಶನಿವಾರ ಜರುಗಲಿದ್ದು, ಅದರ ಪ್ರಯುಕ್ತ ಸೋಮವಾರ ಸಂಜೆ ತೇರು ಮನೆಯಿಂದ ತೇರು ಗಡ್ಡೆ ಹೊರ ಹಾಕುವ ಮೂಲಕ ರಥೋತ್ಸವದ ಧಾರ್ಮಿಕ ಕಾರ್ಯಗಳಿಗೆ ಚಾಲನೆ ದೊರೆಯಿತು.

ಬೆಳಗಿನ ಜಾವದಿಂದಲೇ ಅರ್ಚಕರು ತೇರು ಗಡ್ಡೆಗೆ ಪೂಜಾ ಕೈಂಕರ್ಯಗಳನ್ನು ನೆರವೇರಿಸಿ, ವಿವಿಧ ಬಗೆಯ ಪುಷ್ಪಗಳಿಂದ ಅಲಂಕರಿಸಿದರು. ಅಲಂಕರಿಸಿದ ತೇರು ಗಡ್ಡೆಯನ್ನು ಸಾಯಂಕಾಲ ಶ್ರೀ ಸ್ವಾಮಿಯ ಕ್ರಿಯಾಮೂರ್ತಿಗಳ ಸಮ್ಮುಖದಲ್ಲಿ ಧರ್ಮಕರ್ತರು, ಕಟ್ಟೆಮನಿ ದೈವದವರು, ಆಯಗಾರ ಬಳಗದವರ ನೇತೃತ್ವದಲ್ಲಿ ಭಕ್ತರು ಸಕಲ ಮಂಗಲವಾದ್ಯ ಮೇಳಗಳೊಂದಿಗೆ ತೇರು ಮನೆಯಿಂದ ತೇರು ಬಯಲು ಪ್ರದೇಶಕ್ಕೆ ತೇರು ಗಡ್ಡೆಯನ್ನು ತಂದು ನಿಲ್ಲಿಸಿದರು.



**ನಿಯಂತ್ರಣಕ್ಕೆ ಸಿಗದ ರಥಗಡ್ಡೆ :** ತೇರು ಮನೆಯಿಂದ ಹೊರತಂದ ರಥ ಗಡ್ಡೆಯ ಮಿಣಿಯನ್ನು ಭಕ್ತಸ್ತೋಮ ರಥ ಬೀದಿಯಲ್ಲಿ ನೇರವಾಗಿ ಎಳೆದರೂ ರಥಗಡ್ಡೆ ಎಡಕ್ಕೆ ಹಾಗೂ ಬಲಕ್ಕೆ ಚಲಿಸಿದ ಪರಿಣಾಮ ಹೂವಿನ ಮಾರುಕಟ್ಟೆ ಮುಂಭಾಗದಲ್ಲಿ ನಿಲ್ಲಿಸಿದ್ದ ದ್ವಿಚಕ್ರ ವಾಹನದ ಮೇಲೆ ಸಾಗಿ ವಾಹನ ಸಂಪೂರ್ಣ ಜಖಂ ಗೊಂಡಿತು. ಸ್ವಲ್ಪ ಮುಂದೆ ಸಾಗಿದ ರಥಗಡ್ಡೆ ಬಲಗಡೆ ಇರುವ ಅಂಬಣ್ಣ ಪಳಾರದ ಅಂಗಡಿ ಕಟ್ಟಡಕ್ಕೆ ತಾಗುತ್ತಿದ್ದಂತೆ ಎಚ್ಚೆತ್ತುಕೊಂಡ ನಿಯಂತ್ರಕರು ನಿಯಂತ್ರಣಕ್ಕೆ ತಂದರು.

2017 ರಲ್ಲಿ ರಥೋತ್ಸವದಲ್ಲಿ ನಡೆದ ಅವಘಡದಿಂದ 2018 ರಲ್ಲಿ ನೂತನ ರಥಗಡ್ಡೆ ನಿರ್ಮಾಣವಾಗಿತ್ತು. ನೂತನ ರಥ ಗಡ್ಡೆಯ ಸ್ಟೇರಿಂಗ್ ಹಾಗೂ ಬ್ಯಾಟರಿ, ಬ್ರೇಕ್ ಮುಂತಾದ ನಿಯಂತ್ರಿಸುವ ಉಪಕರಣಗಳನ್ನು ನಿಯಮಿತವಾಗಿ ನಿರ್ವಹಣೆ ಮಾಡದ ಪರಿಣಾಮ ಇಂತಹ ವ್ಯತ್ಯಯಗಳು ಜರುಗುತ್ತವೆ ಎಂದು ಭಕ್ತರು ತಮ್ಮ ಅನಿಸಿಕೆ ವ್ಯಕ್ತಪಡಿಸದರು.

ಈಚೆಗೆ ಜಿಲ್ಲಾಧಿಕಾರಿಗಳು ಹಾಗೂ ಶಾಸಕರ ನೇತೃತ್ವದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಇಲಾಧಿಕಾರಿಗಳು ಉತ್ಸವದ ಕಾರ್ಯಗಳನ್ನು ಜಾಗರೂಕತೆಯಿಂದ ಕಾರ್ಯನಿರ್ವಹಿಸಬೇಕೆಂದು ಸೂಚಿಸಿ ದ್ದರೂ ಈ ಘಟನೆ ನಡೆದಿದೆ ಹಾಗಾಗಿ ಅಸಂಖ್ಯಾತ ಭಕ್ತರು ಸೇರುವ ರಥೋತ್ಸವದಂದು ಮುನ್ನಚ್ಚರಿಕೆ ಕ್ರಮ ಕೈಗೊಳ್ಳಬೇಕೆಂದು ಭಕ್ತರು ಒತ್ತಾಯಿಸಿದ್ದಾರೆ.




### ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಸೂಚನೆ

# ಅತಿಥಿ ಸತ್ಕಾರಕ್ಕೆ ಆದ್ಯತೆ ನೀಡಿ

## ಹಂಪಿ ಉತ್ಸವ–ಹೋಟೇಲ್ ಮಾಲೀಕರ ಸಭೆ

■ ಹಂಪಿ ಟೈಮ್ಸ್ ಹೊಸಪೇಟೆ

ಹಂಪಿ ಉತ್ಸವ ಆಗಮಿಸುವ ಗಣ್ಯರು, ಗಣ್ಯ ಕಲಾವಿದರಿಗೆ ವಸತಿ ಮತ್ತು ಊಟದ ವ್ಯವಸ್ಥೆ ತೊಂದರೆಯಾಗದಂತೆ ಎಲ್ಲಾ ಹೋಟೇಲ್ ಮಾಲೀಕರು ನಿಗಾವಹಿಸಿ ಉತ್ಸವ ಯಶಸ್ವಿಗೆ ಸಹಕರಿಸಬೇಕು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿದರು.



ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಹಂಪಿ ಉತ್ಸವದ ಪೂರ್ವಸಿದ್ಧತಾ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಸೋಮವಾರ ಮಾತನಾಡಿದರು. ಹಿಂದಿನ ಬಾರಿ ಹಂಪಿ ಉತ್ಸವದಲ್ಲಿ ಹೋಟೇಲ್ ಮಾಲೀಕರು ಮತ್ತು ವ್ಯವಸ್ಥಾಪಕರ ಸಹಕಾರದಿಂದಲೇ ರಾಜ್ಯಮಟ್ಟದ ಅಧಿಕಾರಿಗಳು, ಅತಿಗಣ್ಯರು ಹಾಗೂ ಗಣ್ಯ ಕಲಾವಿದರಿಗೆ ಸಮರ್ಪಕವಾಗಿ ವಸತಿ ಮತ್ತು ಊಟದ ಸೌಕರ್ಯ ಒದಗಿಸುವ ಮೂಲಕ ಉತ್ತಮ ಸತ್ಕಾರದಿಂದಾಗಿ ಯಶಸ್ವಿಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಲಾಗಿದೆ, ಇದಕ್ಕೆ ಜಿಲ್ಲಾಡಳಿತ ಅಭಾರಿಯಾಗಿದೆ. ಈ ಬಾರಿಯು ಸಹ ಹೋಟೇಲ್ ಮಾಲಿಕರು, ವ್ಯವಸ್ಥಾಪಕರ ಸಹಕಾರ ಅಗತ್ಯವಾಗಿದೆ. ಉತ್ಸವದಲ್ಲಿ ಹೋಟೇಲ್ ಮಾಲೀಕರು ಅತಿ ಗಣ್ಯ, ಗಣ್ಯಕಲಾವಿದರು ಹಾಗೂ ರಾಜ್ಯ ಮಟ್ಟದ ಅಧಿಕಾರಿಗಳಿಂದ ಯಾವುದೇ ದೂರು ಬಾರದಂತೆ ಅತಿಥಿ ಸತ್ಕಾರಕ್ಕೆ ಆದ್ಯತೆ ನೀಡಬೇಕು. ಮೂರು ದಿನಗಳ ಮುಂಚಿತವಾಗಿ ಅತಿಥಿಗಳ ಪಟ್ಟಿಯನ್ನು ಜಿಲ್ಲಾಡಳಿತದಿಂದ ನೀಡಲಾಗುವುದು. ಎಲ್ಲಾ ಹೋಟೇಲ್, ರೆಸ್ಟೋರೆಂಟ್ ಗಳಲ್ಲಿ ಅಡುಗೆ ಮನೆಗಳ ಸ್ವಚ್ಛತೆಗೆ, ಲಾಡ್ಜಿಂಗ್ ಗಳಲ್ಲಿ ನೈರ್ಮಲ್ಯತೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಹೆಚ್ಚು ದರ ನಿಗದಿ ಮಾಡಿ ಪ್ರವಾಸಿಗರಿಗೆ ತೊಂದರೆ ನೀಡದಿರಿ ಎಂದು ಸೂಚಿಸಿದರು.

ಈ ವೇಳೆ ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ, ಸಹಾಯಕ ಆಯುಕ್ತರಾದ ವಿವೇಕಾನಂದ, ತಹಶೀಲ್ದಾರ ಎಂ.ಶೃತಿ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಸ್ಥಳೀಯ ಎಲ್ಲಾ ಹೋಟೇಲ್ ಗಳ ಮಾಲೀಕರು, ವ್ಯವಸ್ಥಾಪಕರು ಭಾಗವಹಿಸಿದ್ದರು.



# 3 ತಿಂಗಳ ಬಾಕಿ ಪ್ರೋತ್ಸಾಹಧನ ನೀಡಿ

## ಡಿಎಚ್‌ಒ ಕಚೇರಿ ಎದುರು ಆಶಾ ಕಾರ್ಯಕರ್ತೆಯರ ಪ್ರತಿಭಟನೆ





■ ಹಂಪಿ ಟೈಮ್ಸ್ ಹೊಸಪೇಟೆ

ತಾಯಿ ಮಗುವಿನ ಆರೋಗ್ಯ ಹಾಗೂ ಸ್ವಾಸ್ಥ್ಯ ಸಮಾಜಕ್ಕೆ ಹಗಲಿರಳು ದುಡಿಯುತ್ತಿರುವ ಆಶಾ ಕಾರ್ಯಕರ್ತೆಯರನ್ನು ಆರೋಗ್ಯ ಇಲಾಖೆಯ ಆಧಾರಸ್ತಂಭಗಳೆಂದು ಅಧಿಕಾರಿಗಳು ಹೇಳಿದರೆ ಸಾಲದು, ಅವರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಬೇಕು. ಬಾಕಿ ಉಳಿಸಿಕೊಂಡಿರುವ ಮೂರು ತಿಂಗಳ ಎಂಸಿಟಿಎಸ್ ಪ್ರೋತ್ಸಾಹ ಧನ ಕೂಡಲೇ ಬಿಡಗಡೆ ಮಾಡಬೇಕು ಎಂದು ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ವಿಜಯನಗರ ಜಿಲ್ಲಾ ಸಮಿತಿ ಗೌರವಧ್ಯಕ್ಷ ಡಾ.ಪ್ರಮೋದ್ ಆಗ್ರಹಿಸಿದರು.

ನಗರದ ಜಿಲ್ಲಾ ವೈದ್ಯಾಧಿಕಾರಿ ಕಚೇರಿ ಮುಂದೆ ಆಶಾಕಾರ್ಯಕರ್ತರು ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಸೋಮವಾರ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಮಾತನಾಡಿದರು. ಆಶಾ ಕಾರ್ಯಕರ್ತರಿಗೆ ಪ್ರೋತ್ಸಾಹಧನ ವಿಳಂಬವಾಗುತ್ತಿರುವುದರಿಂದ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಎ.ಎನ್.ಸಿ. ಪಿ.ಎನ್.ಸಿ, ಎಂ.ಆರ್1, ಎಂ.ಆರ್2 ಇನ್ನಿತರ ಅನೇಕ ಕಾಂಪೋನೆಂಟ್‌ಗಳನ್ನು ಪೋರ್ಟಲ್ ಮೂಲಕ ತುಂಬಿದ್ದರೂ, ವೆರಿಫಿಕೇಷನ್‌ಗೆ ತೋರಿಸುತ್ತಿಲ್ಲ. ಹೋರಾಟ ಮಾಡದೆ ಏನನ್ನೂ ಪಡೆಯದ ಸ್ಥಿತಿ ಆಶಾ ಕಾರ್ಯಕರ್ತರದ್ದಾಗಿದೆ. ಕೂಡಲೇ ಸ್ಪಂದಿಸಿ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು.

> ತಾಂತ್ರಿಕ ಸಮಸ್ಯೆಗಳಿಂದಾಗಿ ಎಂ.ಸಿ.ಟಿ.ಎಸ್ ಪ್ರೋತ್ಸಾಹ ಧನ ಬಂದಿಲ್ಲ. ಒಂದು ವಾರದಲ್ಲಿ ಸೂಕ್ತ ಪರಿಹಾರ ಕಲ್ಪಿಸಲಾಗುವುದು. ತಾಂತ್ರಿಕ ಸಮಸ್ಯೆಯಿಂದ ಟಿ ಸಿ ಸಂಬಂಧಿತ ಪ್ರೋತ್ಸಾಹ ಧನ 3 ವರ್ಷಗಳಿಂದ ಬಂದಿಲ್ಲ. ಅದನ್ನು ಬಗೆಹರಿಸುವ ಪ್ರಕ್ರಿಯೆ ನಡೆಯುತ್ತಿದೆ ಹಾಗೂ ಇನ್ನಿತರ ಬೇಡಿಕೆಗಳನ್ನು ಪರೀಶೀಲಿಸಿ ಕ್ರಮಕೈಗೊಳ್ಳಲಾಗುವುದು.
>
> – ಡಾ.ಶಂಕರನಾಯ್ಕ, ಡಿಎಚ್‌ಒ, ವಿಜಯನಗರ



ಸಂಘದ ರಾಜ್ಯ ಉಪಾಧ್ಯಕ್ಷೆ ಎ.ಶಾಂತಾ ಮಾತನಾಡಿ, ಆಶಾ ಕಾರ್ಯಕರ್ತರಿಗೆ ಅವರದಲ್ಲದ ಕೆಲಸಗಳಾದ ಕಫ ತರುವುದು, ವ್ಯಾಕ್ಸೀನ್ ಕ್ಯಾರಿಯರ್ ತರವುದು ಇನ್ನಿತರ ಕೆಲಸಗಳನ್ನು ಹೇರುತ್ತಾ, ಅವರನ್ನು ಒತ್ತಡಕ್ಕೆ ಸಿಲುಕಿಸಲಾಗುತ್ತಿದೆ. ಜಿಲ್ಲಾ ಪಂಚಾಯತ್ ಸಿಇಓ ಅಧ್ಯಕ್ಷತೆಯಲ್ಲಿ 3 ತಿಂಗಳಿಗೊಮ್ಮೆ ಕುಂದುಕೊರತೆ ಸಭೆ ಕರೆಯಬೇಕೆಂಬ ಆದೇಶವಿದ್ದರೂ, ಇದು ಕಾರ್ಯಗತವಾಗುತ್ತಿಲ್ಲ. ಆರೋಗ್ಯ ಇಲಾಖೆಯ ಅನೇಕ ಸುತ್ತೋಲೆಗಳನ್ನು ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಿಲ್ಲ. ಆಶಾ ಕಾರ್ಯಕರ್ತರ ಸಮಸ್ಯೆಗೆ ಪರಿಹಾರ ಸೂಚಿಸಬೇಕು ಎಂದು ಒತ್ತಾಯಿಸಿದರು.

ಸಂಘದ ಕಾರ್ಯದರ್ಶಿ ಗೌರಮ್ಮ ಕೆ.ಎಸ್ ಮಾತನಾಡಿ, ಆರೋಗ್ಯಾಧಿಕಾರಿಗಳು ಆಶಾ ಕಾರ್ಯಕರ್ತರ ಬೇಡಿಕೆಗೆ ಸ್ಪಂದಿಸಲು ವಿಳಂಬ ಮಾಡಿದರೆ ಹೋರಾಟ ತೀವ್ರಸ್ವರೂಪ ಪಡೆಯಲಿದೆ ಎಂದರು.

ಉಪಾಧ್ಯಕ್ಷೆ ಗೌರಮ್ಮ , ಮುಖಂಡರಾದ ಮಹೇಶ್ವರಿ, ಮಂಗಳಾ, ನಾಗಮ್ಮ, ಸ್ಪೂರ್ತಿ, ಚೆನ್ನಮ್ಮ, ಆಶಾ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

# ಕಾರ್ಮಿಕರಿಂದ ನರೇಗಾ ದಿನಾಚರಣೆ

■ ಹಂಪಿ ಟೈಮ್ಸ್ ಕೊಟ್ಟೂರು

ನರೇಗಾ ಯೋಜನೆಯು ದುಡಿಯುವ ಜನರ ಬದುಕಿಗೆ ಆಶಾಕಿರಣವಾಗಿದೆ. ಕೂಲಿ ಕಾರರಿಗೆ ಕೆಲಸ ಇಲ್ಲದ ವೇಳೆ ನರೇಗಾದಡಿ ಸಾಮೂಹಿಕ ಕೆಲಸ ನೀಡಿ ದುಡಿಯುವ ವರ್ಗಕ್ಕೆ ಆತ್ಮಸ್ಥೈರ್ಯ ತುಂಬುವ ಮತ್ವದ ಯೋಜನೆ ಇದಾಗಿದೆ ಎಂದು ಗ್ರಾಪಂ ಕಾರ್ಯದರ್ಶಿ ಚಂದ್ರಶೇಖರ ಹೇಳಿದರು.

ತಾಲೂಕಿನ ಕೋಗಳಿ ಗ್ರಾಮದಲ್ಲಿ ಭಾನುವಾರ ಕಾರ್ಮಿಕ ದಿನಾಚರಣೆ ಪ್ರಯುಕ್ತ




ಕೇಕ್ ಕತ್ತರಿಸಿ ಕೂಲಿಕಾರರಿಗೆ ಸಿಹಿ ಹಂಚಿ ಮಾತನಾಡಿದರು. ಕೂಲಿಕಾರರು ಕಾಯಕ ಸ್ಥಳವನ್ನು ಸ್ವಚ್ಛಗೊಳಿಸಿ ರಂಗೋಲಿ ಹಾಕಿ ಶೃಂಗರಿಸಿದ್ದರು. ಪರಸ್ಪರರು ಸಿಹಿ ತಿನಿಸಿ ದಿನಾಚರಣೆ ಆಚರಿಸಿ ಸಂಭ್ರಮಿಸಿದರು.

ಅಧಿಕಾರಿ ಎನ್ ಮಲ್ಲೇಶ್ ಕೋಗಳಿ, ತಾಲೂಕು ಕಾರ್ಯಕರ್ತೆ ನೇತ್ರಾವತಿ, ಮಂಗಳ ಗೌರಮ್ಮ, ರತ್ನಮ್ಮ, ರೇವಮ್ಮ ಸರಾಯಿ ಪರಶುರಾಮ, ನಾಗರಾಜ, ಹನುಮಂತ ನಾಗಭೂಷಣ ಗಂಗಾಧರ ಮತ್ತು ಕೋಗಳಿ ಗ್ರಾಮ ಪಂಚಾಯಿತಿ ಕಾಯಕ ಬಂದುಗಳು ಮತ್ತು ಕೂಲಿ ಕಾರ್ಮಿಕರು, ಪಂಚಾಯಿತಿ ಸಿಬ್ಬಂದಿಗಳು ಹಾಜರಿದ್ದರು.




## ಸ್ಟುಡೆಂಟ್ ಕಾಲಂ

# ಪ್ರಯತ್ನಕ್ಕೆ ಎಂದಿಗೂ ಫಲವಿದೆ



ಸೋಮಪುರ ಎಂಬ ಹಳ್ಳಿಯಲ್ಲಿ ರವಿ ಎಂಬ ಬಾಲಕನಿದ್ದ. ಅವನ ತಂದೆ ಹೆಸರು ರಾಮಣ್ಣ ತಾಯಿಯ ಹೆಸರು ಲಕ್ಷ್ಮಮ್ಮ. ಅವನು ಬಹಳ ಸೋಮಾರಿಯಾಗಿದ್ದನು. ಬೆಳಗ್ಗೆ ಬೇಗನೆ ಏಳುತ್ತಿರಲಿಲ್ಲ, ಹಲ್ಲು ಉಜ್ಜುತ್ತಿರಲಿಲ್ಲ ಮತ್ತು ದಿನಾಲು ಶಾಲೆಗೆ ಹೋಗುತ್ತಿರಲಿಲ್ಲ. ಆದರೂ ಅವನಿಗೆ ಆರ್ಮಿಗೆ ಸೇರಬೇಕೆನ್ನುವ ಆಸೆ ಇತ್ತು. ಅದಕ್ಕೆ ನಾನು ಹೇಗಾದರೂ ಮಾಡಿ ಓದೋದನ್ನ ಕಲಿತು ಆರ್ಮಿ ಟ್ರೈನಿಂಗ್‌ಗೆ ಹೋಗಲೇಬೇಕು ಎಂದು ನಿರ್ಧರಿಸಿದನು. ಅದಕ್ಕಾಗಿ ಅವನು ಶ್ರಮ ಪಡ್ತಾ, ರಾತ್ರಿ ವೇಳೆ ಬೇಗನೆ ಮಲಗಿ ಬೆಳಗ್ಗೆ ಬೇಗನೆ ಏಳಲು ಪ್ರಾರಂಭಿಸಿದ. ಎದ್ದ ನಂತರ ಅವನ ಗೆಳೆಯರಾದ ಸೋಮೇಶ, ನಿತಿನ್, ಪ್ರದೀಪ್, ಅನಿಲಾ, ಸೃಜನ, ರಾಜೇಶ ಇವರೆಲ್ಲರನ್ನ ಬೇಗನೇ ಅವರವರ ಮನೆಗೆ ಹೋಗಿ ಅವರನ್ನು ಎಬ್ಬಿಸುಸುತ್ತಿದ್ದ. ಅಂತೆಯೇ ರವಿಯ ಆಸೆಯನ್ನು ಈಡೇರಿಸಲು ರವಿಯ ಗೆಳೆಯರು ಅವನಿಗೆ ಸಹಾಯ ಮಾಡುತ್ತಿದ್ದರು. ರವಿ ಬೇಗನೆ ಎದ್ದು ಓದೋದನ್ನ ಕಲಿತ. ಒಬ್ಬ ಒಳ್ಳೆಯ ಹುಡುಗನಾದ. ನಂತರ ಅವನು ಶ್ರಮಪಟ್ಟು ಓದಿ ಓದಿ ದೊಡ್ಡವನಾದ.

ಅವನು ಆರ್ಮಿ ಟ್ರೈನಿಂಗ್‌ಗೆ ಸೇರಿದ. ಅಲ್ಲಿ ಬಹಳ ಕಷ್ಟಪಟ್ಟು ಆ ಟ್ರೈನಿಂಗ್‌ನಲ್ಲಿ ಯಶಸ್ಸು ಪಡೆದ. ನಂತರ ಅವನ ತಂದೆ ತಾಯಿ ಬಳಿ ಹೋಗಿ ಈ ವಿಷಯವನ್ನು ಹೇಳಿದಾಗ ಅವರಿಗೆ ಬಹಳ ಖುಷಿಯಾಯಿತು. ಅವನಿಗೂ ಕೂಡ ತುಂಬಾನೇ ಖುಷಿಯಾಯಿತು. ನಂತರ ಅವನು ಸ್ನೇಃಇತರ ಬಳಿ ಬಂದು 'ನೀವು ನನಗೋಸ್ಕರ ಬೆಳಗ್ಗೆ ಬೇಗನೆ ಎದ್ದು ಬಂದು ನನಗೆ ಓದೋದನ್ನ ಕಲಿಸಿದ್ದೀರಿ ಮತ್ತು ನನಗೋಸ್ಕರ ನೀವು ತುಂಬಾನೇ ಕಷ್ಟ ಪಟ್ಟಿದ್ದೀರಿ. ಅದಕ್ಕೆ ನಿಮಗೆ ತುಂಬು ಹೃದಯದ ಧನ್ಯವಾದಗಳು' ಎಂದು ಹೇಳುತ್ತಾನೆ. ನಂತರ ಅವನು ಸಮಾಜಕ್ಕೆ ಹಾಗೂ ಊರಿಗೆ ಒಳ್ಳೆಯ ವ್ಯಕ್ತಿಯಾಗಿ, ತಂದೆ ತಾಯಿಗೆ ಒಳ್ಳೆಯ ಮಗನಾಗಿ, ದೇಶಕ್ಕೆ ಒಬ್ಬ ಯೋಧನಾಗುತ್ತಾನೆ. ಪ್ರಯತ್ನ ಪಡಲಾರದೆ ಗುರಿ ತಲುಪಲು ಸಾಧ್ಯವಿಲ್ಲ ಎಂಬುದಕ್ಕೆ ರವಿ ಸಾಕ್ಷಿಯಾಗುತ್ತಾನೆ.

**– ಭರತ್ ಕುಮಾರ್ ಕೆ. 9ನೇ ತರಗತಿ**
**ಸರ್ಕಾರಿ ಪ್ರೌಢಶಾಲೆ ಬಸರಕೋಡು. ಹಗರಿಬೊಮ್ಮನಹಳ್ಳಿ(ತಾ)**


## ಮಕ್ಕಳ ಜ್ಞಾನಭಂಡಾರ ಹೆಚ್ಚಳಕ್ಕೆ ಇರಲಿ ಮನೆಗೊಂದು ದಿನಪತ್ರಿಕೆ

**ಪತ್ರಿಕೆ ಓದುವುದರಿಂದ ಮಕ್ಕಳಿಗಾಗುವ ಪ್ರಯೋಜನೆಗಳು**

ಭಾಷಾ ಕೌಶಲ್ಯ ಸುಧಾರಣೆ
ಸಾಮಾನ್ಯ ಜ್ಞಾನ ಹೆಚ್ಚಳ
ನೈತಿಕ ಮತ್ತು ಸಾಮಾಜಿಕ ಅರಿವು
ಮೊಬೈಲಿನಿಂದ ದೂರವಿರುವುದು
ಓದುವ ಹವ್ಯಾಸಕ್ಕೆ ಅಡಿಪಾಯ

**ಹೊಸಪೇಟೆಯಲ್ಲಿ ಹಂಪಿ ಟೈಮ್ಸ್ ಪತ್ರಿಕೆಗಾಗಿ ಸಂಪರ್ಕಿಸಿ**
**99029 09399, 99805 59681**
**97407 42251, 80735 89125**


## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038


## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.


# ರಥಸಪ್ತಮಿ.... ರಥಾರೂಢ ಸೂರ್ಯನ ದಿನ

ಸೂರ್ಯ ಅತ್ಯಂತ ಮುಖ್ಯವಾದ ಬೆಳಕನ್ನು ನೀಡುವ ಆಕಾಶಕಾಯವೆಂದು ವೈಜ್ಞಾನಿಕವಾಗಿ ಸಾಬೀತಾಗಿದ್ದರೂ... ಸೂರ್ಯನ ಕೃಪೆಯಿಂದ ನಿಂತಿರುವುದು ಈ ವಿಶ್ವ ಸಂಕುಲ. ಆತನಿಂದಲೇ ಸಕಲ ಚರಾಚರಗಳು ಅಸ್ತಿತ್ವದಲ್ಲಿವೆ. ಸೂರ್ಯ ನಿಯಮಿತತೆಗೆ ಇನ್ನೊಂದು ಹೆಸರು ಒಂದೇ ಒಂದು ದಿನವೂ ತನ್ನ ದಿನಚರಿಯನ್ನು ತಪ್ಪಿಸದ ಸೂರ್ಯನ ಬಿಸಿಲಿನಿಂದಲೇ ಸಸ್ಯಗಳಲ್ಲಿ ಆಹಾರ ತಯಾರಿಸುವ ದ್ಯುತಿ ಸಂಶ್ಲೇಷಣ ಕ್ರಿಯೆಯು ನಡೆಯುವುದು. ಸೂರ್ಯನ ಕೃಪೆಯಿಂದಲೆ ಪೃಥ್ವಿಯ ಬದುಕು ಸರಳ ಮತ್ತು ಸುವ್ಯವಸ್ಥಿತವಾಗಿ ನಡೆಯುತ್ತದೆ.

ಇಂತಿಪ್ಪ ಸೂರ್ಯನನ್ನು ಕುರಿತು ಜಗತ್ತಿನ ಎಲ್ಲರಲ್ಲೂ ಪೂಜ್ಯ ಭಾವನೆ. ನಮ್ಮೆಲ್ಲರ ಬದುಕಿನ ಚುಕ್ಕಾಣಿ ಹಿಡಿದಿರುವ ಸೂರ್ಯ ದೇವನನ್ನು ದೈವವೆಂದು ಪೂಜಿಸುವ ಅಗಾಧ ಹಿರಿಮೆಯ ಸಂಸ್ಕೃತಿ ನಮ್ಮದು. ಆದ್ದರಿಂದಲೇ ಪ್ರತಿ ವರ್ಷ ಮಾರ್ಗಶಿರ ಮಾಸದ ಶುಕ್ಲ ಪಕ್ಷದ ಸಪ್ತಮಿ ದಿನದಂದು ಸೂರ್ಯನನ್ನು ಭಾರತದ ವಿವಿಧ ಭಾಗಗಳಲ್ಲಿ ವಿಧವಿಧವಾಗಿ ಆರಾಧಿಸುತ್ತಾರೆ, ಪೂಜಿಸುತ್ತಾರೆ.

ರಥ ಸಪ್ತಮಿಯು ಪಂಚಮಿ ಅಥವಾ ವಸಂತ ಪಂಚಮಿಯ ಮರುದಿನ ಬರುತ್ತದೆ ಆದ್ದರಿಂದ ಇದನ್ನು ಸೂರ್ಯ ಜಯಂತಿ ಅಥವಾ ಮಾಘ ಜಯಂತಿ ಎಂದೂ ಕರೆಯಲಾಗುತ್ತದೆ. ಇದು ಮಾಘ ಮಾಸದಲ್ಲಿ ನಡೆಯುತ್ತದೆ.ಜನರು ಇಡೀ ಜಗತ್ತನ್ನು ಬೆಳಗಿಸುವ ಮತ್ತು ವಿಶ್ವದಲ್ಲಿ ಜೀವನವನ್ನು ಸಾಧ್ಯವಾಗಿಸುವ ಸೂರ್ಯನ ಕಡೆಗೆ ಕೃತಜ್ಞತೆಯನ್ನು ತೋರಿಸಲು ಆಚರಿಸುತ್ತಾರೆ.

ಸಪ್ತಮಿಯ ದಿನದಂದು, ಏಳು ಬಿಳಿ ಕುದುರೆಗಳು ಹೂಡಿರುವ ಚಿನ್ನದ ರಥದ ಮೇಲೆ ಕುಳಿತಿರುವ ಭಗವಾನ್ ಸೂರ್ಯನನ್ನು ಪೂಜಿಸಲಾಗುತ್ತದೆ. ಈ ಚಿತ್ರವು ಸೂರ್ಯನ ಮಹಿಮೆಯನ್ನು ಸೂಚಿಸುತ್ತದೆ, ಇದು ಕೇವಲ ಭೂಮಿಗೆ ಸೀಮಿತವಾಗಿಲ್ಲ .

ಕೃತಜ್ಞತೆಯ ಮೂಲಕ ಅವನನ್ನು ಸ್ತುತಿಸುವುದಕ್ಕಾಗಿ ಭಗವಾನ್ ಸೂರ್ಯನನ್ನು ಗೌರವಿಸಲು ಅನೇಕ ದೇವಾಲಯಗಳನ್ನು ನಿರ್ಮಿಸಲಾಗಿದೆ. ಈ ದಿನ ಈ ಎಲ್ಲಾ ದೇವಾಲಯಗಳನ್ನು ಅಲಂಕರಿಸಲಾಗುತ್ತದೆ. ವಿಶೇಷ ಕಾರ್ಯಕ್ರಮಗಳು ಮತ್ತು ಆಚರಣೆಗಳು ನಡೆಯುತ್ತವೆ. ಜನರು ಸೂರ್ಯ ದೇವಾಲಯಗಳಿಗೆ ಭೇಟಿ ನೀಡುತ್ತಾರೆ; ಅವರು ಬೆಳಕು ಮತ್ತು ಶಕ್ತಿಯನ್ನು ನೀಡಿದ್ದಕ್ಕಾಗಿ ಭಗವಂತನಿಗೆ ದೇವರನ್ನು ಆರಾಧಿಸಿ ಧನ್ಯವಾದ ಸಲ್ಲಿಸುತ್ತಾರೆ. ತಿರುಮಲ ತಿರುಪತಿ ಬಾಲಾಜಿಯಂತಹ ಹಲವಾರು ದೊಡ್ಡ ದೇವಾಲಯಗಳು ಸೂರ್ಯನಿಗೆ ವಿಶೇಷ ಪೂಜೆಗಳು ಮತ್ತು ಅಲಂಕಾರಗಳನ್ನು ಏರ್ಪಡಿಸುತ್ತವೆ ಮತ್ತು ಮುಖ್ಯವಾಗಿ ಉತ್ತರದ ಒರಿಸ್ಸಾ ಮತ್ತು ದಕ್ಷಿಣದ ಮಹಾರಾಷ್ಟ್ರ, ತಮಿಳುನಾಡು, ಕರ್ನಾಟಕ ಮತ್ತು ಆಂಧ್ರಪ್ರದೇಶ ರಾಜ್ಯಗಳಲ್ಲಿ ಆಚರಿಸಲಾಗುತ್ತದೆ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಈ ದಿನ ಸ್ನಾನ ಮಾಡುವುದು ವಿಶಿಷ್ಟ ಮಹತ್ವವನ್ನು ಹೊಂದಿದ್ದು ಜನರು ಬೆಳಗ್ಗೆ ಬೇಗ ಎದ್ದು ಪವಿತ್ರ ಸ್ನಾನ ಮಾಡುತ್ತಾರೆ. ಈ ದಿನ ಸೂರ್ಯೋದಯದ ಸಮಯದಲ್ಲಿ ಮಾಡುವ ಸ್ನಾನವನ್ನು ಮಂಗಳಕ 'ರವೆಂದು ಪರಿಗಣಿಸ ಲಾಗುತ್ತದೆ. ವ್ಯಕ್ತಿಯು ಉತ್ತಮ ಆರೋಗ್ಯ ಮತ್ತು ಜೀವನವನ್ನು ಅನುಭವಿಸುವಲ್ಲಿ ಎಲ್ಲಾ ಕಾಯಿಲೆಗಳು ಮತ್ತು ನಕಾರಾತ್ಮಕತೆಯನ್ನು ತೆಗೆದು ಹಾಕುತ್ತದೆ ಈ ದಿನ ಎಂದು ಪರಿಗಣಿಸಲಾಗಿದೆ. ಈ ಕಾರಣಕ್ಕಾಗಿ ಈ ದಿನವನ್ನು "ಆರೋಗ್ಯ ಸಪ್ತಮಿ" ಎಂದೂ ಕರೆಯ ಲಾಗುತ್ತದೆ. ತಮಿಳುನಾಡಿನಲ್ಲಿ ಜನರು ಎಕ್ಕದ ಎಲೆ, ಹಲಸಿನ ಎಲೆ ಮತ್ತು ಸಿಗದೇ ಇದ್ದ ಪಕ್ಷದಲ್ಲಿ ವೀಳ್ಯದೆಲೆಯನ್ನು ಸ್ನಾನಕ್ಕೆ ಬಳಸುತ್ತಾರೆ.

ಭಕ್ತರು ಸ್ನಾನ ಮಾಡಿದ ನಂತರ ಅವರು ಸೂರ್ಯನಿಗೆ "ಅರ್ಘ್ಯದಾನ" ನೀಡು ತ್ತಾರೆ. ಈ ಸಮಯದಲ್ಲಿ ಅವರು ಸೂರ್ಯನಿಗೆ ನೀರನ್ನು ನಿಧಾನವಾಗಿ ಅರ್ಪಿಸುತ್ತಾರೆ ಸಣ್ಣ ಕಲಶ ವನ್ನು ಬಳಸಿ ನಿಂತಿರುವ ಸ್ಥಾನದಲ್ಲಿ ಸೂರ್ಯನನ್ನು ಎದುರಿಸುವ ಮೂಲಕ ಇದನ್ನು ಮಾಡಲಾ ಗುತ್ತದೆ; ಜನರು ನೈವೇದ್ಯಕ್ಕಾಗಿ ತಾಮ್ರದ ಕಲಶವನ್ನು ಬಳಸುತ್ತಾರೆ. ನೀರನ್ನು ಅರ್ಪಿಸುವಾಗ ಅವರು ಸೂರ್ಯ ಮಂತ್ರವನ್ನು ಪಠಿಸುತ್ತಾರೆ; ಕೆಲವು ಜನರು ಸೂರ್ಯನ ಹನ್ನೆರಡು ವಿಭಿನ್ನ ಹೆಸರುಗಳನ್ನು ಜಪಿಸುತ್ತಾರೆ.

ಅವರು ನೀರಿನ ಆಚರಣೆಗಳನ್ನು ಮಾಡಿದ ನಂತರ ಸೂರ್ಯನನ್ನು ಪೂಜಿಸುತ್ತಾರೆ. ಇದಕ್ಕಾಗಿ ಭಕ್ತರು ತುಪ್ಪದ ದೀಪವನ್ನು ಹಚ್ಚಿ ಸೂರ್ಯನ ಮುಂದೆ ಪ್ರದಕ್ಷಿಣೆ ಹಾಕುತ್ತಾರೆ. ನಂತರ ಅವರು ಸೂರ್ಯನ ದಿಕ್ಕಿನಲ್ಲಿ ಕೆಂಪು ಹೂವುಗಳನ್ನು ಅರ್ಪಿಸಿ ಕರ್ಪೂರ ಮತ್ತು ಧೂಪದ ಬತ್ತಿಗಳನ್ನು ಬೆಳಗಿಸುತ್ತಾರೆ. ಹೀಗೆ ಮಾಡುವುದರಿಂದ ಸೂರ್ಯನ ಆಶೀರ್ವಾದವು ಭಕ್ತನಿಗೆ ದೊರೆಯುತ್ತದೆ ಮತ್ತು ಯಶಸ್ಸಿನ ಜೊತೆಗೆ ದೀರ್ಘ ಮತ್ತು ಆರೋಗ್ಯಕರ ಜೀವನವನ್ನು ದಯಪಾಲಿಸುತ್ತದೆ ಎಂಬುದು ನಂಬಿಕೆ.



ಪ್ರಾತಃಕಾಲದಲ್ಲಿ ಸೂರ್ಯನ ಚಿತ್ರವನ್ನು ಬಿಡಿಸುವ ಮೂಲಕ ಸೂರ್ಯನನ್ನು ಸ್ವಾಗತಿಸುತ್ತಾರೆ. ಕೃತಜ್ಞತೆ ಯನ್ನು ತೋರಿಸು ತ್ತಾರೆ. ಸ್ವಾಗತಾರ್ಥವಾಗಿ ತಮ್ಮ ಮನೆಯ ಮುಂದೆ ರಂಗೋಲಿ ಹಾಕುತ್ತಾರೆ. ನಂತರ ಅವರು ತಮ್ಮ ಅಂಗಳದಲ್ಲಿ ಸೂರ್ಯನಿಗೆ ಎದುರಾಗಿ ಮಣ್ಣಿನ ಪಾತ್ರೆಯಲ್ಲಿ ಹಾಲನ್ನು ಕುದಿಸಿ ಆ ಹಾಲನ್ನು ಭಗವಾನ್ ಸೂರ್ಯನಿಗೆ ನೈವೇದ್ಯಕ್ಕಾಗಿ ತಯಾರಿಸುವ ಅರ್ಪಿಸಲು ಸಿಹಿ ಅನ್ನವನ್ನು(ದಧ್ಯನ್ನ) ತಯಾರಿಸಲು ಬಳಸಲಾಗುತ್ತದೆ.

ಈ ದಿನ ಸೂರ್ಯ ಮಂತ್ರ ಅಥವಾ ಗಾಯತ್ರಿ ಮಂತ್ರವನ್ನು ಪಠಿಸುವುದು ಅತ್ಯಂತ ಮಂಗಳಕರವೆಂದು ಪರಿಗಣಿಸಲಾಗಿದೆ.

ಹಿಂದೂ ಧರ್ಮದಲ್ಲಿ, ರಥ ಸಪ್ತಮಿಯನ್ನು ಸೂರ್ಯನ ಜನ್ಮದಿನವೆಂದು ಪರಿಗಣಿಸಲಾಗಿರುವುದರಿಂದ, ಆ ದಿನದಂದು ಅವನನ್ನು ಪೂಜಿಸುವುದರಿಂದ ಜೀವನದಲ್ಲಿ ಸೂರ್ಯನ ಅನುಗ್ರಹವನ್ನು ಪಡೆಯುತ್ತೇವೆ ಎಂಬ ನಂಬಿಕೆ.ಹಿಂದೂ ಧರ್ಮದಲ್ಲಿ, ಸೂರ್ಯನು ದೀರ್ಘಾಯುಷ್ಯ, ಉತ್ತಮ ಆರೋಗ್ಯ, ಸಕಾರಾತ್ಮಕ ಮನಸ್ಸು ಮತ್ತು ಯಶಸ್ಸನ್ನು ನೀಡುತ್ತಾನೆ. ಆದ್ದರಿಂದ ನಿರ್ದಿಷ್ಟ ದಿನದಂದು ಸೂರ್ಯನನ್ನು ಪೂಜಿಸುವುದು ಈ ಎಲ್ಲಾ ಅಂಶಗಳೊಂದಿಗೆ ಭಕ್ತನನ್ನು ಪವಿತ್ರಗೊಳಿಸುತ್ತದೆ; ಜೊತೆಗೆ, ಇದು ಜೀವಿತಾವಧಿಯಲ್ಲಿ ಮಾಡಿದ ಪಾಪಗಳನ್ನು ತೊಡೆದುಹಾಕಲು ಸಹಾಯ ಮಾಡುತ್ತದೆ, ಆದ್ದರಿಂದ ಪ್ರಸ್ತುತ ಮತ್ತು ಮುಂದಿನ ಜನ್ಮದಲ್ಲಿ ಅವನು ಉತ್ತಮ ಜೀವನವನ್ನು ಪಡೆಯುತ್ತಾನೆ.

ರಥ ಸಪ್ತಮಿಯ ದಿನವು ಉತ್ತರ ಗೋಳಾರ್ಧದಲ್ಲಿ ಸೂರ್ಯನ ಚಲನೆಯನ್ನು ಸಹ ಸೂಚಿಸುತ್ತದೆ. ಚಳಿಗಾಲವು ಕೊನೆಗೊಳ್ಳುತ್ತದೆ ಮತ್ತು ಬೇಸಿಗೆಯ ಋತುವು ಪ್ರಾರಂಭವಾಗುತ್ತದೆ; ಇದು ಭಾರತದ ದಕ್ಷಿಣ ರಾಜ್ಯಗಳಲ್ಲಿ ಹೆಚ್ಚು ಗಮನಾರ್ಹವಾದ ತಾಪಮಾನ ಏರಿಕೆಯ ಸೂಚನೆಯಾಗಿದೆ. ಈ ಸಂದರ್ಭವು ಕೊಯ್ಲು ಋತುವಿನ ಆರಂಭವನ್ನು ಸಹ ಸೂಚಿಸುತ್ತದೆ. ರೈತರು ತಮ್ಮ ಬೆಳೆಗಳನ್ನು ಕೊಯ್ಲು ಮಾಡುತ್ತಾರೆ ಮತ್ತು ಬೆಳೆಗಳನ್ನು ಬೆಳೆಯಲು ಸರಿಯಾದ ವಾತಾವರಣವನ್ನು ಒದಗಿಸಿದ ಸೂರ್ಯ ದೇವರು ಮತ್ತು ಪ್ರಕೃತಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತಾರೆ.

ಒಂದು ಆಖ್ಯಾಯಿಕೆಯ ಪ್ರಕಾರ ಸೂರ್ಯನನ್ನು ಈ ದಿನ ಕಶ್ಯಪ ಮಹರ್ಷಿಗಳು ದತ್ತು ತೆಗೆದುಕೊಂಡರು, ಆ ಕಾರಣದಿಂದ ಸೂರ್ಯನ ಜಯಂತಿ ಎಂದು ಈ ದಿನವನ್ನು ಆಚರಿಸಲಾಗುತ್ತದೆ.

ಇನ್ನು ಪತಂಜಲಿಯ ಯೋಗ ಸೂತ್ರದ ಪ್ರಕಾರ ಈ ದಿನ ಸೂರ್ಯನನ್ನು ಪೂಜಿಸಿ ಆತನು ಮೂಡುವ ದಿಕ್ಕಿನಲ್ಲಿ ಪ್ರಾತಃಕಾಲದಲ್ಲಿ 108 ಸೂರ್ಯನಮಸ್ಕಾರವನ್ನು ಹಾಕುವುದರಿಂದ ಚಳಿಯನ್ನು ತಡೆಯುವ ನಿಟ್ಟಿನಲ್ಲಿ ದೇಹಕ್ಕೆ ಚೈತನ್ಯ ಶಕ್ತಿ,ದೈಹಿಕ ಆರೋಗ್ಯ ಮತ್ತು ಮಾನಸಿಕ ಶಕ್ತಿ ದೊರೆಯುತ್ತದೆ ಇದನ್ನು ಸಾಂಕೇತಿಕವಾಗಿ ಸೂರ್ಯ ಸಪ್ತಮಿ ಎಂದು ಪ್ರಾರಂಭಿಸಿದರೆ ವರ್ಷವಿಡಿ ನಡೆಸಿಕೊಂಡು ಹೋಗಬೇಕು ಎಂಬುದು ಪತಂಜಲಿಯ ಆಶಯ. ಸೂರ್ಯ ನಮಸ್ಕಾರ ಎಂಬುದು ಹಲವಾರು ದೈಹಿಕ ಆಸನಗಳ ಒಂದು ಗುಂಪು ಕ್ರಿಯೆಯಾಗಿದೆ. 108 ಸೂರ್ಯ ನಮಸ್ಕಾರವನ್ನು ಹಾಕಲೇಬೇಕೆಂದಿಲ್ಲ. ನಮ್ಮೆಲ್ಲರಲ್ಲಿ ಬದುಕುವ ಚೈತನ್ಯವನ್ನು ನೀಡುವ ಸೂರ್ಯನನ್ನು ಗೌರವಿಸಲು ಒಂದು ನಮಸ್ಕಾರವನ್ನು ಹಾಕಿದರೂ ಆತನ ಕೃಪಾಕಟಾಕ್ಷ ನಮಗೆ ದೊರೆಯುವುದು. ವೈಜ್ಞಾನಿಕವಾಗಿಯೂ ಮುಂಜಾವಿನ ಈ ಸಮಯದಲ್ಲಿ ಎದ್ದು ವ್ಯಾಯಾಮ ಮಾಡುವುದರಿಂದ ದೇಹಕ್ಕೆ ಅಗತ್ಯವಾಗಿ ಬೇಕಾಗುವ ವಿಟಮಿನ್ ಡಿ ದೊರೆಯುತ್ತದೆ.

ಈ ಬಾರಿ ಫೆಬ್ರವರಿ 4 ರಂದು ರಥಸಪ್ತಮಿಯ ದಿನವಾಗಿದ್ದು ನಾವೆಲ್ಲರೂ ಸೂರ್ಯ ದೇವನನ್ನು ಪೂಜಿಸೋಣ, ಆತನ ದಿವ್ಯ ಶಕ್ತಿಯ ಅಂಶವನ್ನು ಪಡೆದು ಆರೋಗ್ಯವಂತರಾಗೋಣ. ಎಲ್ಲರಿಗೂ ರಥಸಪ್ತಮಿಯ ಶುಭಾಶಯಗಳು.

# ಎಷ್ಟು ಹಣ ಇದ್ದರೇನು

ಜನ, ಧನ, ಕನಕ, ಭೂಮಿ, ಗೌರವ, ಪ್ರತಿಷ್ಠೆ ಮತ್ತಿತರೆ ಸಾಮಾಜಿಕ ಗೌರವಗಳ ಹಿಂದೆ ಓಡಲು ಆರಂಭಿಸಿದ್ದೇವೆ ಎಷ್ಟರಮಟ್ಟಿಗೆ ಎಂದರೆ.....?

ತಂದೆ ದುಡಿದು ತಂದು ಉಣಬಡಿಸಿ,ತಾಯಿ ತನ್ನ ಮಡಿಲಲ್ಲಿ ಲಾಲಿಸಿ,ಪಾಲಿಸಿ ಮಕ್ಕಳನ್ನು ಸಾಕುತ್ತಾರೆ ಅದು ಕರ್ತವ್ಯ ಎಂದು ಕೊಂಡರೆ ಕರ್ತವ್ಯ.ಆದರೆ.....ಕೆಲ ಮಗ ಅಥವಾ ಮಗಳು ಬೆಳೆದು ದೊಡ್ಡವರಾದ ಮೇಲೆ ಏನು ಮಾಡುತ್ತಾರೆ?

ತಂದೆಯ ಅಥವಾ ತಾಯಿಯ ದುಡಿಮೆಯಲ್ಲಿ ಓದುತ್ತಾರೆ ಬೆಳೆಯುತ್ತಾರೆ.ತಮ್ಮ ಕಾಲ ಮೇಲೆ ತಾವು ನಿಲ್ಲುತ್ತಾರೆ ಸರಿ.ತಪ್ಪು ಎಂದು ಹೇಳಲು ಸಾಧ್ಯವಿಲ್ಲ....ಆದರೆ ಕೆಲವರು ತಮ್ಮ ಕರ್ತವ್ಯ ಮರೆತುಬಿಡುತ್ತಾರೆ?

ತಂದೆ ಸಾಕಿ,ಸಲಹಿ ತನ್ನ ಜೀವನವನ್ನೇ ಮುಡುಪುಪಿಟ್ಟು,ತಾಯಿ ತನ್ನ ಅದೆಷ್ಟೋ ಆಸೆಗಳನ್ನು ಕೈಬಿಟ್ಟು ನಮ್ಮನ್ನು ಸಾಕಿರುತ್ತಾರೆ.ಆದರೆ ನಾವು ಅವರಿಗೆ ಸಮಯ ಕೊಡುವುದಿಲ್ಲ ಕಾರಣ ನಾವೆಲ್ಲರೂ ತುಂಬಾ ಬ್ಯುಸಿ....ಯಾವುದರಲ್ಲಿ ಎಂಬ ಅರಿವಿಲ್ಲ.

ಕೆಲವರು ಪ್ರೀತಿಸಿ ಮದುವೆಯಾಗುತ್ತಾರೆ ಮದುವೆಯಾದ ನಂತರ ಎಲ್ಲವೂ ಮುಗಿದು ಹೋಯಿತು ಎಂದು ದುಡಿಯಲು ಆರಂಭಿಸುತ್ತಾರೆ.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

Scan For Digital Colourful
HAMPI TIMES E-paper

ಪ್ರೀತಿಸಿ ಮದುವೆಯಾದವರಿಗೆ ಪ್ರೀತಿ ಬೇಕು ಗಂಡನ ಸಮಯ ಬೇಕು ಆದರೆ ಗಂಡನಿಗೆ ತನ್ನ ಹೆಂಡತಿಯನ್ನು ಸುಖವಾಗಿ ಇಡಬೇಕೆಂಬ ಕಲ್ಪನೆಯಲ್ಲಿ ಕೆಲವರು ದುಡಿಮೆಯ ಕಡೆಗೆ ಹೆಚ್ಚಿನ ಗಮನ ನೀಡಿ ಹೆಂಡತಿ ಕಡೆಗೆ ಕಡಿಮೆ ಗಮನವನ್ನು ನೀಡುತ್ತಾರೆ ಕಾರಣ ದುಡಿಯುವ ಕಡೆಗೆ ಗಮನ ಎಂದು ಕೊಳ್ಳೋಣ... ಆದರೆ ಪ್ರೀತಿಸಿದ ಹೃದಯದ ಕಥೆ ಏನು? ಸಮಯ ಕೊಡದ ಜಂಜಾಟ ಬೇಕೇ.

ಕುಟುಂಬಸ್ಥರು, ಹಿರಿಯರು ನೋಡಿ ಮದುವೆಯಾದ ಕೆಲ ಯುವತಿಯರು ಸಂಸಾರಿಕ ಜೀವನದಲ್ಲಿ ತೊಡಗಿಕೊಂಡು ಉದ್ಯೋಗಕ್ಕೆ ಹೋಗುವ ಗಂಡನನ್ನು,ಮಗುವನ್ನು ಸಿದ್ದ ಮಾಡಿ ಶಾಲೆಗೆ ಕಳುಹಿಸಿ ಮನೆಯ ಕೆಲಸಗಳಲ್ಲಿ ತಲ್ಲೀನರಾಗುತ್ತಾರೆ.

ಅವರಿಗೆ ಆಗೊಮ್ಮೆ ಈಗೊಮ್ಮೆ ತನ್ನ ಮನೆಯವರ,ಕೆಲಸಕ್ಕೆ ಹೋದ ಗಂಡನ ನೆನಪಾಗುವುದು ಸಹಜ ನೆನಪಾದ ಗಂಡನಿಗೆ ದೂರವಾಣಿ ಮೂಲಕ ಸಂಪರ್ಕಿಸಿ ಮಾತನಾಡಲು ಹೋದರೆ ನಾನು ನಂತರದಲ್ಲಿ ಕಾಲ್ ಮಾಡುತ್ತೇನೆ,ನಾನು ಬ್ಯುಸಿ ಇದ್ದೇನೆ ಎಂದು ಫೋನ್ ಕಟ್ ಮಾಡುತ್ತಾರೆ ಅತ್ತ ಕಡೆಯಿಂದ ತಂದೆ ತಾಯಿಗಳು ಇವರಿಗೆ ಕಾಲ್ ಮಾಡಿದರು ಅದೇ ಉದ್ಗಾರ.

ಊರಿನಲ್ಲಿರುವ ತಂದೆ,ತಾಯಿಗೆ ಇದ್ದಕ್ಕಿದ್ದಂತೆ ಆರೋಗ್ಯದಲ್ಲಿ ಏರುಪೇರಾಗಿದೆ ಎಂದು ಪಕ್ಕದ ಮನೆಯವರು ಕಾಲ್ ಮಾಡಿ ಹೇಳುತ್ತಾರೆ ನಿಮ್ಮ ತಂದೆಗೆ ಹುಷಾರಿಲ್ಲ ನಿಮ್ಮ ತಾಯಿಗೆ ಹುಷಾರಿಲ್ಲ ಬಂದು ನೋಡಿಕೋ ಎಂದು ಕಾರ್ಯ ಒತ್ತಡದ ನಡುವೆ ಮಗ ಅಥವಾ ಮಗಳು ಅಣ್ಣ ನಿನ್ನ ಅಕೌಂಟಿಗೆ ಹಣವನ್ನು ಹಾಕುತ್ತೇನೆ ದಯಮಾಡಿ ಅವರನ್ನು ಆಸ್ಪತ್ರೆಗೆ ತೋರಿಸು ಎಂದು.

ಕೆಲವೊಮ್ಮೆ ಸ್ನೇಹಿತರಿಗೆ ಕರೆ ಮಾಡಿ ನನ್ನ ಅಪ್ಪ ಅಮ್ಮನಿಗೆ ಆರೋಗ್ಯದಲ್ಲಿ ತೊಂದರೆಯಾಗಿದೆ ಹೋಗಿ ತೋರಿಸು ಎಂದು ಕೂಡ ಹೇಳಬಹುದು.ಕೆಲವೊಮ್ಮೆ ಊರಿನ ಆಟೋ ಚಾಲಕರ ಸಹಾಯ ಪಡೆಯುವುದು ಉಂಟು.

ಅತ್ತ ಕಡೆಯಿಂದ ಅದಕ್ಕೊಂದು ಕೊಂಕು ನುಡಿ ನಾವಿಲ್ಲಿ ನೋಡಿಕೊಳ್ಳುತ್ತೇವೆ ಎಂದರು ಇವರು ಬರುವುದಿಲ್ಲ. ಅವರು ಹೇಗೆ ತಾನೇ ಬರುತ್ತಾರೆ? ತಾವು ಹುಟ್ಟಿ ಬೆಳೆದ, ಆಡಿ ನಲಿದ ಊರನ್ನು,ಪ್ರೀತಿಯಿಂದ ಕಟ್ಟಿ ಮೆರೆದ ಕೋಟೆಯನ್ನು,ಪ್ರಾಣಿ ಪಕ್ಷಿಗಳನ್ನು,ಇದ್ದರೆ ನಲ್ಮೆಯ ಜೋಡಿ, ಮಡದಿ/ಗಂಡನ ಇಲ್ಲದಿದ್ದರೆ ನೆನಪನ್ನು.

ಶಾಲೆ ಬಿಟ್ಟು ಬಂದ ಮಗನ ಜೊತೆಗೆ ಒಂದಿಷ್ಟು ಆಟ ಆಡಲಾಗದ, ಪ್ರೀತಿಯಿಂದ ಸಾಕಿ ಸಲಹಿದ ತಂದೆ ತಾಯಿ ಆರೋಗ್ಯ ಕಳೆದುಕೊಂಡಾಗ ಪಕ್ಕದಲ್ಲಿ ಇದ್ದು ಆರೈಕೆ ಮಾಡಲಾಗದ,ತನ್ನ ಸರ್ವಸ್ವವನ್ನು ಹಂಚಿಕೊಂಡ ಹೆಂಡತಿಗೆ ಕೊಡಲಾಗದ ಸಮಯ,ಹಣ



ಇದ್ದರೆ ಅದು ನಶ್ವರವೇ ಸರಿ.

ಹೌದು... ಹಣ ಮುಖ್ಯ. ಹಣವಿಲ್ಲದ ದುಡಿಮೆ ಇಲ್ಲದ ಯಾರಿಗಾದರೂ ಬೆಲೆ ಕೊಡುವುದಿಲ್ಲ ಅದು ತಿಳಿದಿದೆ ಹಾಗೆಂದ ಮಾತ್ರಕ್ಕೆ ಹಣದ ಜೊತೆ ಇರಲು ಸಾಧ್ಯವೇ..

ಮಾನವನ ದೇಹ, ಮೂಳೆ, ಮಾಂಸ, ಪ್ರೀತಿ, ಮಮಕಾರ, ವಿಶ್ವಾಸ ಅಭಿಮಾನ ಇತ್ಯಾದಿ ಹಲವಾರು ಅಂಶಗಳಿಂದ ಕೂಡಿದ ತಡಿಕೆ ಅದಕ್ಕೆ ಕೇವಲ ಹಣದಿಂದ ತೃಪ್ತಿಪಡಿಸಲು ಸಾಧ್ಯವಿಲ್ಲ.

ಇದ್ದಷ್ಟು ದಿನ ಒಂದಷ್ಟು ಪ್ರೀತಿಯನ್ನು ಹಂಚಿಕೊಳ್ಳೋಣ,ಪ್ರೀತಿ ಪಾತ್ರದೊಂದಿಗೆ ನಗುನಗುತ ಬದುಕೋಣ ಅವರಿಗಾಗಿ ಒಂದಿಷ್ಟು ಸಮಯ ಮೀಸಲು ಇರಿಸೋಣ.

ಹಣವಿಲ್ಲದ ಜೀವನ,ಕಾಳಜಿ,ಸಮಯ ನೀಡದ ಪ್ರೀತಿ ಇಲ್ಲದೆ ಜಗ ನಡೆಯದು.ಎಲ್ಲವನ್ನು ಸರಿದೂಗಿಸಿಕೊಂಡು ಮುನ್ನಡೆಯುವುದು ಅವಶ್ಯ ಏನಂತೀರಿ!

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No. 15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಪೂಜಾ ಫಲ

ಜನುಮಗಳ ಪೂಜಾ ಫಲ
ಭಗವಂತನ ನಾಮದ ಬಲ
ಪುಣ್ಯ ಭೂಮಿಯಿದು ಈ ನೆಲ
ಆಗಲಿ ಈ ಜನುಮ ಸಫಲ

ಸಾಧನೆಯೇ ಬದುಕಿನ ದೀವಿಗೆ
ಗುರಿಯಿರಲಿ ಬಾಳಿನ ದಾರಿಗೆ
ಬೀಳದಿರೆ ಮಾಯೆಯ ಬಾವಿಗೆ
ಯಶವಿರುವುದು ಸಾಧಕನ ಪಾಲಿಗೆ

~ ಚೇತನ ಭಾರ್ಗವ,ಬೆಂಗಳೂರು

### ಇರಬೇಕು

ನಗುನಗುತ್ತಲೇ
ಇರಬೇಕು
ಕಾಯಿಲೆ ಸುಳಿಯದಹಾಗೆ
ಇರಬೇಕು
ಚಿಂತೆ ಬಾರದ ಹಾಗೆ
ಇರಬೇಕು
ಎಲ್ಲರೊಳು ಗೆಳೆಯರಹಾಗೆ
ಇರಬೇಕು
ನಿಂದೆ ಕೊಂಕು ಬಾರದಹಾಗೆ
ಇರಬೇಕು
ಯಾರಿಗೂ ಕೇಡು ಬಯಸದಹಾಗೆ
ಇರಬೇಕು
ಮೋಸ ಹೋಗದಹಾಗೆ
ಇರಬೇಕು
ಮನಸ್ಸು ಮಲ್ಲಿಗೆಹೂವಿನಹಾಗೆ
ಇರಬೇಕು
ದೇಶದ್ರೋಹಿ ಆಗದಹಾಗೆ
ಇರಬೇಕು
ಹಲವರಾದರೂ ನೆನೆಯುವಹಾಗೆ

– ಚಂದ್ರಶೇಖರಯ್ಯ, ರೋಣದಮಠ.

ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com

# ಸುಳ್ಳು ಮನುಷ್ಯನಿಗೆ ಆಪ್ತವಾಗುವುದೇಕೆ?

## ಸತ್ಯ ನುಡಿದರೆ ಸಮಾಧಾನ ಸುಳ್ಳು ಆತ್ಮದ ಅವನತಿ

ಮನುಷ್ಯನು ಸಮಾಜದ ಸಾಂಗತ್ಯಕ್ಕೆ ಒಳಗೊಂಡು ಬದುಕು ನಡೆಸುವುದನ್ನು ನಾವು ಕಂಡಿದ್ದೇವೆ. ಈ ಬದುಕಿನಲ್ಲಿ ಭೌತ ಹಾಗೂ ಅಭೌತ ವಸ್ತುಗಳೊಂದಿಗೆ ನಿರಂತರವಾದ ಸಂಬಂಧವನ್ನುಹೊಂದುವುದು ಅವನಿಗೆ ಅನಿವಾರ್ಯವು ಅಗತ್ಯವು ಆಗಿದೆ. ಸಮಾಜ ಅಂದ ಕೂಡಲೇ ಒಬ್ಬನ ಅಸ್ತಿತ್ವ, ಮಾತು–ಕತೆ, ನಡೆ–ನುಡಿಗಳೇ ಚಲನೆಯಲ್ಲಿ ಇರುವುದಿಲ್ಲ. ಅಲ್ಲಿ ಸಾಮುದಾಯಿಕವಾದ ಪ್ರಜ್ಞೆ ಮತ್ತು ಪರಿಸರವು ಕಾರ್ಯನಿರ್ವಹಿಸುತ್ತಿರುತ್ತದೆ. ಪ್ರತಿಯೊಬ್ಬರೂ ಕುಟುಂಬದಲ್ಲಿ ಜೀವನದ ಅಭಿವ್ಯಕ್ತಿಯನ್ನು ಹೊಂದಿದ್ದು ಊರು ನಗರ ದೇಶ ಎಂಬ ಪರಿಕಲ್ಪನೆಯನ್ನು ಹೊಂದಿರುತ್ತಾರೆ. ಪ್ರೀತಿ ವಿಶ್ವಾಸ ನಂಬಿಕೆಗಳ ಜೊತೆಯಲ್ಲಿ ಸತ್ಯ ಸುಳ್ಳುಗಳೆಂಬ ಮಾದರಿಗಳು ನಮ್ಮೊಂದಿಗೆ ದಟ್ಟವಾಗಿ ಚಲನೆಯನ್ನು ಪಡೆದಿದೆ. ಸತ್ಯ ಸುಳ್ಳುಗಳು ಒಂದು ನಾಣ್ಯದ ಎರಡು ಮುಖವಿದ್ದಂತೆ. ಜೀವನದ ಮೌಲ್ಯವನ್ನು ಘನವಾಗಿ ಇಡುವುದಕ್ಕೆ ಅದರ ಅಚ್ಚು ಕದಲದಂತೆ ನೋಡಿಕೊಳ್ಳುವುದಕ್ಕೆ ಸತ್ಯ ಅಂಬೋದು ಅಗತ್ಯ ಎಂದು ಅನೇಕ ಮಹಾತ್ಮರು ಹೇಳಿದ್ದಾರೆ ಮತ್ತು ನಡೆದು ತೋರಿಸಿಕೊಟ್ಟಿದ್ದಾರೆ. ಸತ್ಯ ಎನ್ನುವ ಮೌಲ್ಯದ ಬಗ್ಗೆ ಪದೇ ಪದೇ ಬಿಗುವಾಗಿ ಹೇಳಿದ್ದಾರೆ ಅಂದರೆ ಅಲ್ಲಿ ಸುಳ್ಳು ಉನ್ನತವಾಗಿ ಮನುಷ್ಯನ ನಡುವೆ ನಡೆದಾಡುವ ಜೊತೆಯಲ್ಲಿ ನೈತಿಕತೆಯನ್ನು ಹಾಳುಗೆಡುವುತ್ತಿತ್ತು ಎನ್ನುವುದೇ ಆಗಿದೆ. ಸತ್ಯ ಮತ್ತು ಸುಳ್ಳುಗಳು ಮನುಷ್ಯನ ಭಾವನೆಯ ಮಾತಿನ ರೂಪವಾಗಿದೆ ಇಲ್ಲಿ ಮನಸ್ಸೆ ಪ್ರಧಾನವಾದ ನೆಲೆಯಾಗಿ ಕಾಣಿಸುತ್ತದೆ. ಸತ್ಯ ಮತ್ತು ಸುಳ್ಳುಗಳು ಸಮ ಪ್ರಮಾಣದಲ್ಲಿ ಇರಬೇಕೆ?, ಸತ್ಯ ಹೆಚ್ಚಿದ್ದು ಸುಳ್ಳು ಕಡಿಮೆ ಇರಬೇಕೆ?, ಸುಳ್ಳು ಬಹುವಾಗಿದ್ದು ಸತ್ಯ ಚೂರು ಇರಬೇಕೆ? ಎಂಬುವುದನ್ನು ನಾವು ಕಾಲಮಾನದ ಲೋಕದ ನಡೆಯಿಂದ ಅರ್ಥೈಸಿಕೊಳ್ಳಬೇಕು. ದೇವರು, ಮಹಾತ್ಮರು, ತ್ಯಾಗಿಗಳು, ಯೋಗಿಗಳು, ಆದರ್ಶವಂತರು ಸತ್ಯವನ್ನೇ ಪ್ರಧಾನವೆಂದು ಪ್ರತಿಪಾದಿಸಿದ್ದಲ್ಲದೆ. ಸುಳ್ಳು ನಮ್ಮ ಆತ್ಮದ ಅವನತಿಗೆ ಕಾರಣವೆಂದು ಹೇಳಿದ್ದಾರೆ. ರಾಕ್ಷಸರು, ಮೋಸಗಾರರು, ಸರ್ವಾಧಿಕಾರಿಗಳು, ವಂಚಕರು, ಭ್ರಷ್ಟರು ಮಾತಿನಲ್ಲಿ ನಡೆಯಲ್ಲಿ ಸುಳ್ಳನ್ನೇ ಹೇಳುತ್ತಾರೆಂದು ನಾವು ಗ್ರಹಿಸಿದ್ದೇವೆ. ಭಾವನೆಗಳಿರುವ ಲೋಕದಲ್ಲಿ ಸತ್ಯ ಮತ್ತು ಸುಳ್ಳುಗಳು ಬಳಕೆಯಾಗುತ್ತವೆ ಇಲ್ಲಿ ಸತ್ಯವನ್ನೇ ಹೇಳುವ ಒಂದು ಸುಳ್ಳನ್ನೂ ನುಡಿಯದ ವ್ಯಕ್ತಿ ಯಾರು ಇರುವುದಕ್ಕೆ ಸಾಧ್ಯವಿಲ್ಲ, ಹಾಗೆಯೇ ಸುಳ್ಳನ್ನೇ ಮಾತನಾಡುವ ಸತ್ಯವನ್ನೇ ಕಾಣದ ವ್ಯಕ್ತಿಯು ಯಾರು ಇರುವುದಿಲ್ಲ.

ಲೋಕದಲ್ಲಿ ಸತ್ಯವು ಮೌಲ್ಯದ ಬೆನ್ನ ಮೇಲಿದ್ದರೆ ಸುಳ್ಳು ಅನೈತಿಕತೆಯನ್ನು ಅಪ್ಪಿಕೊಂಡಿದೆ ಎಂಬ ಗ್ರಹಿಕೆಯನ್ನು ಲೋಕವು ನಮಗೆ ನೀಡಿದೆ. ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ ಅಂಬೋ ಮಾತು ಈ ನೆಲೆಯನ್ನು ಪ್ರಮಾಣೀಕ ರಿಸುತ್ತದೆ. ಸತ್ಯದ ತಿಳುವಳಿಕೆಯ ರೂಪವು ತೀಕ್ಷ್ಣತೆಯನ್ನು ಒಳಗೊಂಡಿ ರುತ್ತದೆ ಮತ್ತು ಸುಳ್ಳಿನ ಅಭಿವ್ಯಕ್ತಿಯು ಆಪ್ತತೆಯನ್ನು ಕಾಣಿಸುತ್ತದೆ. ಕತ್ತಲೆಯನ್ನು ಹೊಸೆದಂತ ಮೈಬಣ್ಣವನ್ನು ಹೊಂದಿರುವ ಲೇಖಿ ಜೋಗಿಯಲ್ಲಿ ಮಾತನಾಡುವಾಗ "ನೀವು ಈಗ ಬೆಳ್ಳಾಗೆ ತುಂಬ ಸುಂದರವಾಗಿದ್ದೀರಿ" ಅಂದರೆ ಅವರಿಗೆ ಖುಷಿಯಾಗುತ್ತದೆ, ಮನಸ್ಸು ತುಂಬಿ ನಗುತ್ತಾರೆ. ನೀವು ಸುಳ್ಳು ಹೇಳುತ್ತಿರುವುದು ಅನ್ನುವುದು ಅವರ ಗಮನಕ್ಕೆ ಸಿಗುವುದಿಲ್ಲ. ಅದೇ "ನೀವು ಕಪ್ಪಾಗಿದ್ದೀರಿ" ಅಂತ ಬಾಯಿ ತಪ್ಪಿ ಸತ್ಯವೇ ಹೇಳಿದರೆ ಅವರಿಗೆ ಕೋಪ ಬರುತ್ತದೆ. ಮೊಗ ಊದಿಸಿಕೊಂಡು ಹೋಗುತ್ತಾರೆ. ಆದರೆ ತಾನು ಕಪ್ಪು ಅನ್ನುವುದು ಅವರಿಗೆ ಗೊತ್ತು. ಅದನ್ನುಲೋಕದಮೀಮಾಂಸೆಯಾಗಿ ಒಪ್ಪಿಕೊಂಡು ಜೀರ್ಣವಾಗಿಸಿ ಕೊಳ್ಳುವುದಕ್ಕೆ ಅವರಿಗೆ ಸಾಧ್ಯವಾಗು ವುದಿಲ್ಲ ಇದಕ್ಕೆ ಹೇಳುವುದು ಸತ್ಯ ಕಹಿಯಾಗಿರುತ್ತೆ ಮತ್ತು ಅದು ವಾಸ್ತವವಾಗಿರುತ್ತದೆ.




ಡಾ.ಸುಬ್ರಹ್ಮಣ್ಯ ಸಿ ಕುಂದೂರು
ಲೇಖಕರು, ಮಂಗಳೂರು

Scan For Digital Colourful
HAMPI TIMES E-paper

ಸಮಾಜದಲ್ಲಿ ಗಂಡನಿಗೆ ಹೆಂಡತಿ, ಹೆಂಡತಿಗೆ ಗಂಡ, ತಂದೆ–ತಾಯಿಗೆ ಮಕ್ಕಳು, ಪ್ರಿಯತಮಗೆ ಪ್ರಿಯತಮೆ, ಗುರುಗಳಿಗೆ ವಿದ್ಯಾರ್ಥಿಗಳು ಒಂದಲ್ಲ ಒಂದು ಸುಳ್ಳು ಹೇಳಿ ತಮ್ಮ ತಪ್ಪುಗಳನ್ನು ಗೋರಿಯಲ್ಲಿ ಮುಚ್ಚುವುದಕ್ಕೆ ನೋಡುತ್ತಾರೆ. ಆ ಕ್ಷಣಕ್ಕೆ ಅದು ಪರಿಹಾರವನ್ನು ನೀಡಿದರೂ ಮತ್ತೆ ಮಗದೊಂದು ಸಮಸ್ಯೆಯನ್ನು ಎದುರು ನಿಲ್ಲಿಸುತ್ತದೆ. ಹೀಗೆ ಸುಳ್ಳಿನ ಮೇಲೆ ಸುಳ್ಳು ಹೇಳುವುದು ಅನಿವಾರ್ಯವಾಗುತ್ತದೆ ಇದು ವ್ಯಕ್ತಿಯ ವ್ಯಕ್ತಿತ್ವವನ್ನು ದುರ್ಬಲವಾಗಿಸುತ್ತದೆ. ಜನ ಅವನ ಬೂರಿ, ಪಟಾಕಿ, ರೈಲು, ಲಾಟ್, ಬಂಡಲ್ ಎಂದೆಲ್ಲ ಕರೆದು ನಗುತ್ತಾರೆ. ಸುಳ್ಳು ಒಮ್ಮೆ ಅಭ್ಯಾಸವಾದರೆ ಮತ್ತೆ ನಮ್ಮನ್ನು ಬಿಟ್ಟು ಹೋಗುವುದೇ ಇಲ್ಲ. ಇದೊಂದು ಅಪಾಯಕಾರಿಯಾದ ಅಂಶವು ಆಗಿದೆ. ಸುಳ್ಳು ಹೇಳಿದರೆ ಸತ್ಯದ ತಲೆಯ ಮೇಲೆ ಹೊಡೆದಂತೆ ಇರಬೇಕು ಅಂಬೋ ಆಡು ಮಾತು ಸಹ ಸುಳ್ಳುವೆನ್ನುವುದು ಸತ್ಯದ ಆಶ್ರಯವನ್ನು ಪಡೆದರೆ ಮಹತ್ವವನ್ನು ಪಡೆದುಕೊಳ್ಳುತ್ತದೆ ಎನ್ನುವುದು ಸತ್ಯವೇ ಆಗಿದೆ. 'ನಮ್ಮ ಪರಿಚಯಸ್ಥರ ಮನೆಯ ಹುಡುಗ ಕಾಲೇಜಿಗೆ ಸೇರಿದ್ದ. ಅವನು ವಾರದಲ್ಲಿ ನಾಲ್ಕು ದಿನ ರಜೆ ಮಾಡುತ್ತಿದ್ದ ಕೊಟ್ಟ ಯಾವ ಪತ್ಯ ಕೆಲಸವನ್ನು ಮಾಡುತ್ತಿರಲಿಲ್ಲ. ಅವನು ಬಂದಾಗ "ಏಕೆ ರಜೆ" ಅಂತ ಕೇಳಿದರೆ ಮೊಗವನ್ನು ಸಣ್ಣದು ಮಾಡಿ ಕಣ್ಣಿನಲ್ಲಿ ನೀರು ತುಂಬಿಸಿಕೊಂಡು ಅಪ್ಪನಿಗೆ ದೇಹದಲ್ಲಿ ಖಾಯಿಲೆ ನಿಂತದ್ದರಿಂದ ಅವರನ್ನು ನೋಡಿಕೊಂಡಿದ್ದೆ ಎಂದೂ ಪದೇ ಪದೇ ಹೇಳುತ್ತಿದ್ದ. ನಾವು ಕೇಳಿ ಕೇಳಿ ಸುಸ್ತಾಗಿ ಒಮ್ಮೆ ಅವನ ತಂದೆ ಕರೆಸಿ ಮಾತನಾಡಿದೆ. ಅವರಿಗೆ ಯಾವ ಖಾಯಿಲೆಯು ಬಂದಿರಲಿಲ್ಲ. ಸಮ್ಮನೆ ಸುಳ್ಳು ಹೇಳಿ ರಜೆ ಮಾಡುತ್ತಿದ್ದ. ರಜೆ ಮಾಡಿದಾಗ, ತಪ್ಪಾದಾಗ, ಹಣ ನೀಡಬೇಕಾದಾಗ, ಮನೆಯಲ್ಲಿ ತಿಳಿಯದೇ ಪ್ರೀತಿ ಮಾಡಿದಾಗ ಸುಳ್ಳು ನಮ್ಮನ್ನು ಅಂಟಿಕೊಂಡು ವಿಜೃಂಭಿಸುತ್ತೆ.



ಸುಳ್ಳು ಹೇಳದೇ ಸತ್ಯವನ್ನು ಬದುಕಿನ ದಾರಿಗೆ ಒಗ್ಗಿಸಿಕೊಂಡು ನಡೆಯುವುದನ್ನು ನಾವು ಅಭ್ಯಾಸ ಮಾಡಿಕೊಳ್ಳಬೇಕು. ಆಗ ಅದೇನೋ ಒಂದು ಸಮಾಧಾನ ನಮ್ಮಲ್ಲಿ ಇರುತ್ತದೆ. ತಾಂತ್ರಿಕತೆಯನ್ನು ಅಪ್ಪಿಕೊಂಡು ದೈನಂದಿನ ಬದುಕು ನಡೆಸುವ ನಾವುಗಳು ಸತ್ಯ ಎನ್ನುವ ಮೌಲ್ಯವನ್ನು ಕಳೆದಿದ್ದೇವೆ. ಹಾಗಾಗಿಯೇ ನಮ್ಮೊಳಗೆ ನೆಮ್ಮದಿಯ ಪರಿಭಾಷೆಯು ಕಾಣುತಿಲ್ಲ. ಇದನ್ನೆಲ್ಲ ಮೀರಿ ನಾವು ಸತ್ಯದ ನಡೆ ನುಡಿಯನ್ನು ನಮ್ಮದಾಗಿಸಿಕೊಂಡು ನಡೆಯುವುದಕ್ಕೆ ಪ್ರಯತ್ನ ಪಡಬೇಕು ಆಗ ನಮ್ಮ ವ್ಯಕ್ತಿತ್ವಕ್ಕೆ ಬೆಲೆ ಸಿಗುತ್ತದೆ.



## ತುಂಗಭದ್ರಾ ನೀರಿನ ಮಟ್ಟ

ಸೋಮವಾರ : 03–02–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1616.08 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 8929 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 51.020 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1588.25 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 272 ಕ್ಯುಸೆಕ್ |
| ಸಾಮರ್ಥ್ಯ | 9.632 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಕ್ರೋಧಿ

04–02–2025 – ಮಂಗಳವಾರ

| | |
|---|---|
| ತಿಥಿ | : ಸಪ್ತಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಅಶ್ವಿನಿ |
| ಯೋಗ | : ಶುಭ |
| ಕರಣ | : ಗರಜ |
| ಸೂರ್ಯೋದಯ | : 07:06:7 |
| ಸೂರ್ಯಾಸ್ತ | : 18:15:12 |
| ರಾಹು ಕಾಲ | : 15:28–16:52 |
| ಯಮಘಂಡ ಕಾಲ | : 09:54–11:17 |
| ಗುಳಿಕ ಕಾಲ | : 12:41–14:05 |

ಭಾವಪೂರ್ಣ ಶ್ರದ್ಧಾಂಜಲಿ
ನಿಧನ - ಪುಣ್ಯ ಸ್ಮರಣೆ
ಜಾಹೀರಾತುಗಳಿಗೆ
ವಿಶೇಷ ರಿಯಾಯತಿ
ನಿಧನದ ಬಗ್ಗೆ ಕುಟುಂಬ, ಸ್ನೇಹಿತರು, ಮತ್ತು ಪರಿಚಿತರಿಗೆ ಶೀಘ್ರ ಮತ್ತು ಸರಿಯಾದ ಮಾಹಿತಿ ನೀಡಲು ಇದು ನೆರವಾಗುತ್ತದೆ.
ಜಾಹೀರಾತು ನೀಡಲು ಸಂಪರ್ಕಿಸಿ
ಹಂಪಿ ಟೈಮ್ಸ್
94486 33038

# ಭವಿಷ್ಯ ಭಾರತ ನಿರ್ಮಾಣದಲ್ಲಿ ವಿದ್ಯಾರ್ಥಿಗಳ ಪಾತ್ರ ಅನನ್ಯ

## ಶಾಸಕ ಡಾ. ಎನ್‌.ಟಿ. ಶ್ರೀನಿವಾಸ್ ಹೇಳಿಕೆ



■ ಹಂಪಿ ಟೈಮ್ಸ್ ಕೂಡ್ಲಿಗಿ

ಭವಿಷ್ಯ ಭಾರತದ ನಿರ್ಮಾಣದಲ್ಲಿ ವಿದ್ಯಾರ್ಥಿಗಳ ಪಾತ್ರ ಅನನ್ಯವಾದುದು ಎಂದು ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಹೇಳಿದರು. ಪಟ್ಟಣದ ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜಿಗೆ ನೂತನ ನಾಲ್ಕು ಹೆಚ್ಚುವರಿ ಕೊಠಡಿಗಳ ಉದ್ಘಾಟಿಸಿ ಮಾತನಾಡಿದರು. ಬಹುತೇಕ ಗ್ರಾಮೀಣ ಭಾಗದಿಂದ ಅಭ್ಯಾಸ ಮಾಡಲು ಬರುತ್ತಿರುವ ವಿಧ್ಯಾರ್ಥಿಗಳು, ತಮ್ಮ ನೆಚ್ಚಿನ ಗುರುಗಳಿಗೆ ಮೊದಲು ವಿಧೇಯರಾಗಿರಬೇಕು. ಪೋಷಕರು ಕೂಲಿ ಮಾಡಿ ನಿಮಗೆ ಉತ್ತಮ ವಿಧ್ಯಾಭ್ಯಾಸ ನೀಡಲು ಹಗಲಿರುಳು ಶ್ರಮಿಸುತ್ತಾರೆ ಅವರ ಭರವಸೆಯನ್ನು ಹುಸಿಗೊಳಿಸದೇ ನಿಷ್ಠೆಯಿಂದ ಅಂದಿನ ಪಾಠಗಳನ್ನು ಆಲಿಸಿ, ಓದಿನಕಡೆ ಮನಸ್ಸು ಕೇಂದ್ರೀಕರಿಸಬೇಕು ಎಂದರು. ಭವಿಷ್ಯ ಭಾರತದ ನಿರ್ಮಾತೃಗಳು ನೀವು. ಶಿಕ್ಷಣವಂತರಾಗಿ ದೇಶದ ಸುಭದ್ರತೆಗೆ ನೀವುಗಳು ಆಧಾರ ಸ್ಥಂಭವಾಗಬೇಕಿದೆ. ಇತ್ತೀಚಿನ ಯುವ ಜನಾಂಗ ಮೋಜು,ಮಸ್ತಿ ಎಂದು ಸಣ್ಣ ವಯಸ್ಸಿನಲ್ಲಿಯೇ ಕುಡಿತ, ಧೂಮಪಾನ ಸೇರಿದಂತೆ ಗುಟ್ಕಾ ಚಟಗಳಿಗೆ ದಾಸರಾಗುತ್ತಿದ್ದಾರೆ. ಇದರಿಂದ ಒಂದು ಕುಟುಂಬ ಮಾತ್ರವಲ್ಲ, ಇಡೀ ದೇಶದ ವ್ಯವಸ್ಥೆಯೇ ದುರ್ಬಲವಾಗುತ್ತದೆ. ಆದ್ದರಿಂದ ಯುವ ಜನಾಂಗ ಶಿಕ್ಷಣವಂತರಾಗಿ ಉನ್ನತ ವಿಧ್ಯಾಭ್ಯಾಸ ಮಾಡಿ ಉನ್ನತ ಸ್ಥಾನ ಅಲಂಕರಿಸಿ ದೇಶದ ಸತ್ ಪ್ರಜೆಗಳಾಗಿ ಬಾಳಲಿ ಎಂದು ಸರ್ಕಾರ ಹತ್ತು ಹಲವು ಸೌಕರ್ಯಗಳ ಒದಗಿಸಿದೆ ಅದರ ಸದುಪಯೋಗ ಮಾಡಿಕೊಂಡು ಭವಿಷ್ಯ ಭಾರತದ ಕಟ್ಟುವ ಕೆಲಸ ಮಾಡುವಂತೆ ವಿಧ್ಯಾರ್ಥಿಗಳನ್ನು ಪ್ರೇರಪಿಸಿದರು. ಪಪಂ ಅಧ್ಯಕ್ಷ ಕಾವಲಿ ಶಿವಪ್ಪನಾಯಕ, ವಾಲ್ಮೀಕಿ ಮಹಾಸಭಾದ ತಾಲೂಕು ಅಧ್ಯಕ್ಷ ಎಸ್.ಸುರೇಶ್,

ಸಪಪೂ ಕಾಲೇಜು ಪ್ರಾಚಾರ್ಯೆ ಡಾ.ಟಿ.ಕೊತ್ಲಮ್ಮ, ಉಪನ್ಯಾಸಕರಾದ ನಾಗರಾಜ ಕೊಟ್ರಪ್ಪನವರ್, ಜೆ.ವೆಂಕಟೇಶ, ನಾಗರಾಜ, ಹೆಗ್ಗಪ್ಪ ಹಳ್ಳಿ, ಸಕ್ರಪ್ಪ ರಡ್ಡೇರ, ಶ್ರೀನಿವಾಸ್, ಇಮಾಂಮ್ ಹಡಗಲಿ, ರಾಜಾಭಕ್ಷಿ, ಸುಮಾ,ನಳಿನಾ ಸೇರಿದಂತೆ ಅನೇಕರು ಇದ್ದರು.

14 ಭಾಷೆಗಳಲ್ಲಿ
ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ
ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ
ಸುದ್ದಿ, ಲೇಖನ ಓದಿರಿ...
www.hampitimes.com

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ

HAMPI TIMES MARGADARSHI
ಈಗಿಂದಲೇ ಪುನರ್‌ಮನನ ಮಾಡಿ
ಪರೀಕ್ಷೆಗೆ ನಾವು ಸಿದ್ಧ 45 ದಿನ
ಮನಸ್ಸು ಮಾಡು-ಕರ್ತವ್ಯ ನಿಷ್ಟನಾಗು-ಕಾದು ನೋಡು
https://epaper.hampitimes.com

ನಿನ್ನ ಏಳಿಗೆ ನಿನ್ನ ಕೈಲಿ
ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಕನ್ನಡ

### ಕನ್ನಡ– ವ್ಯಾಕರಣ ಅಲಂಕಾರಗಳು

**1. ಉಪಮಾಲಂಕಾರ ಎಂದರೇನು ? ಉದಾಹರಣೆ ಕೊಡಿ.**

**ಉತ್ತರ** – ಎರಡು ವಸ್ತುಗಳಿಗೆ ಇರುವ (ಉಪಮೇಯ ಮತ್ತು ಉಪಮಾನಗಳಿರುವ) ಪರಸ್ಪರ ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದನ್ನು ಉಪ ಮಾಲಂಕಾರ ಎನ್ನುವರು.

1. ಉಪಮೇಯ– ಕವಿಯು ಯಾವ ವಸ್ತುವನ್ನು ಕುರಿತು ವರ್ಣಿಸುತ್ತಾನೆಯೋ ಅದನ್ನು ಉಪಮೇಯ ಎನ್ನುವರು.
2. ಉಪಮಾನ– ಕವಿಯು ಯಾವ ವಸ್ತುವನ್ನು ಆಧಾರವಾಗಿ ಟ್ಟುಕೊಂಡು ಅಥವಾ ಮಾನದಂಡವನ್ನಾಗಿ ಇಟ್ಟುಕೊಂಡು ವರ್ಣಿಸು ತ್ತಾನೆಯೋ ಅದನ್ನು ಉಪಮಾನ ಎನ್ನುವರು.
3. ಉಪಮಾ ವಾಚಕ– ಉಪಮೇಯ ಮತ್ತು ಉಪಮಾನಗಳಿಗೆ ಸಂಬಂಧವನ್ನು ಕಲ್ಪಿಸುವ ಪದವನ್ನು ಉಪಮಾ ವಾಚಕ ಎನ್ನುವರು.
4. ಸಮಾನ ಧರ್ಮ–ಉಪಮೇಯ ಮತ್ತು ಉಪಮಾನಗಳಲ್ಲಿರುವ ಸಮಾನ ಅಥವಾ ಸಾಧಾರಣ ಗುಣಗಳನ್ನು ಸಮಾನ ಧರ್ಮ ಎನ್ನುವರು.

ಉದಾ– "ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರದಂತೆ"
ಉಪಮೇಯ– ನೀಚರಿಗೆ ಮಾಡಿದ ಉಪಕಾರ
ಉಪಮಾನ– ಹಾವಿಗೆ ಎರೆದ ಹಾಲು, ಉಪಮಾಚಕಪದ– ಅಂತೆ,
ಸಮಾನ ಧರ್ಮ– ಸ್ಪಷ್ಟವಾಗಿಲ್ಲ., ಸಮನ್ವಯ– ಇಲ್ಲಿ ಉಪಮೇಯವಾದ ನೀಚರಿಗೆ ಮಾಡಿದ ಉಪಕಾರವನ್ನು ಉಪಮಾನವಾದ ಹಾವಿಗೆ ಎರೆದ ಹಾಲಿಗೆ ಹೋಲಿಸಿ ವರ್ಣಿಸಲಾಗಿದೆ. ಆದ್ದರಿಂದ ಇದು ಉಪಮಾಲಂಕಾರವಾಗಿದೆ
ಲಕ್ಷಣ – ಎರಡು ವಸ್ತುಗಳಿಗಿರುವ( ಉಪಮೇಯ ಉಪಮಾಮಾನಗಳಿಗಿರುವ) ಸಾದೃಶ್ಯ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದನ್ನು ಉಪಮಾಲಂಕಾರ ಎನ್ನುವರು.
ಅಲಂಕಾರ– ಉಪಮಾಲಂಕಾರ.

**2. ಭೀಮ ದುರ್ಯೋಧನರು ಮದ ಗಜಗಳಂತೆ ಹೋರಾಡಿದರು.**
ಉಪಮೇಯ– ಭೀಮ ದುರ್ಯೋಧನರು
ಉಪಮಾನ– ಮದಗಜಗಳು, ಉಪಮಾಚಕ ಪದ– ಅಂತೆ
ಸಮಾನ ಧರ್ಮ– ಹೋರಾಡುವುದು
ಸಮನ್ವಯ– ಇಲ್ಲಿ ಉಪಮೇಯವಾದ ಭೀಮ ದುರ್ಯೋಧನರನ್ನು ಉಪಮಾನವಾದ ಮದಗಜಗಳಿಗೆ ಹೋಲಿಸಿ ವರ್ಣಿಸಲಾಗಿದೆ.
ಲಕ್ಷಣ– ಎರಡು ವಸ್ತುಗಳಿಗೆ ಇರುವ ಸಾದೃಶ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದು ಉಪಮಾಲಂಕಾರ ಎನಿಸುವುದು.
ಅಲಂಕಾರ– ಉಪಮಾಲಂಕಾರ.

**3. ಮರನೇರಿದ ಮರ್ಕಟನಂತೆ**
ಉಪಮೇಯ– ಸ್ಪಷ್ಟವಾಗಿಲ್ಲ( ಮನಸ್ಸು), ಉಪಮಾನ– ಮರನೇರಿದ ಮರ್ಕಟನಂತೆ., ಉಪಮಾಚಕ ಪದ– ಅಂತೆ
ಸಮಾನ ಧರ್ಮ– ಸ್ಪಷ್ಟವಾಗಿಲ್ಲ( ಚಂಚಲತೆ)
ಸಮನ್ವಯ– ಇಲ್ಲಿ ಉಪಮೇಯವಾದ ಮನಸ್ಸನ್ನು ಉಪಮಾನವಾದ ಮರವನೇರಿದ ಮರ್ಕಟಕ್ಕೆ ಹೋಲಿಸಿ ವರ್ಣಿಸಲಾಗಿದೆ.
ಲಕ್ಷಣ– ಎರಡು ವಸ್ತುಗಳಿಗೆ ಇರುವ ಸಾದೃಶ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಲಾಗಿದೆ. ಅಲಂಕಾರ– ಉಪಮಾಲಂಕಾರ.

**2. ರೂಪಕಾಲಂಕಾರ ಎಂದರೇನು ? ಉದಾಹರಣೆ ಕೊಡಿ.**
ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡು ಬರದೆ ಅವೆರಡು ಒಂದೇ ಎಂದು ವರ್ಣಿಸಿದರೆ ಅದನ್ನು ರೂಪಕಾಲಂಕಾರ ಎನ್ನುವರು.
ಉದಾಹರಣೆ–1. ಅಳ್ಳಿರಿಯುತಿಪ್ಪ ಎಮ್ಮ ಒಡಲಬೇಗೆಯ ಬೆಂಕಿಯುರಿ ನಿನ್ನನಿರಿಯದೆ ಪೇಳು ವಿಶ್ವಾಮಿತ್ರ.
ಉಪಮೇಯ– ಒಡಲ ಬೇಗೆ, ಉಪಮಾನ– ಬೆಂಕಿ ಯುರಿ
ಸಮನ್ವಯ– ಇಲ್ಲಿ ಉಪಮೇಯವಾದ ಅಯೋಧ್ಯೆಯ ಪ್ರಜೆಗಳ ಒಡಲ ಬೇಗೆಯನ್ನು ಉಪಮಾನವಾದ ಬೆಂಕಿ ಯುರಿಗೆ ಅಭೇಧವಾಗಿ ಊಹಿಸಿರುವುದರಿಂದ ಇದು ರೂಪ ಕಲಂಕಾರ.
ಲಕ್ಷಣ– ಉಪಮೇಯ ಮತ್ತು ಉಪಮಾನ ಗಳಿಗೆ ಭೇದವು ಕಂಡು ಬರದೆ ಅವೆರಡು ಒಂದೇ ಎಂದು ವರ್ಣಿಸಿದರೆ ಅದು ರೂಪ ಕಾಲಂಕಾರ.
ಅಲಂಕಾರ– ರೂಪಕಾಲಂಕಾರ.

**2. ಮಾರಿ ಔತಣವಾಯ್ತು ನಾಳಿನ ಭಾರತವು.**
ಉಪಮೇಯ– ನಾಳಿನ ಭಾರತ ಯುದ್ಧ.
ಉಪಮಾನ– ಮಾರಿಯ ಔತಣ.
ಸಮನ್ವಯ– ಇಲ್ಲಿ ಉಪಮೇಯವಾದ ನಾಳಿನ ಭಾರತ ಯುದ್ಧವನ್ನು ಉಪಮಾನ ಮಾರಿಯ ಔತಣಕ್ಕೆ ಅಭೇದ್ಯವಾಗಿ ರೂಪಿಸಿ ವರ್ಣಿಸಲಾಗಿದೆ.
ಲಕ್ಷಣ– ಉಪಮೇಯ ಮತ್ತು ಉಪಮಾನಗಳಿಗೆ ಅಭೇದತೆಯನ್ನು ಹೇಳುವುದು ರೂಪಕಾಲಂಕಾರ.
ಅಲಂಕಾರ– ರೂಪಕಾಲಂಕಾರ.

**3. ದೃಷ್ಟಾಂತ ಅಲಂಕಾರ ಎಂದರೇನು? ಉದಾಹರಣೆ ಕೊಡಿ.**
ಎರಡು ಬೇರೆ ಬೇರೆ ವಾಕ್ಯಗಳು( ಉಪಮೇಯ ,ಉಪಮಾನ) ಅರ್ಥ ಸಾದೃಶ್ಯದಿಂದ ಒಂದರ ಪ್ರತಿಬಿಂಬ ಮತ್ತೊಂದು ಎಂದು ತೋರುವಂತಿದ್ದರೆ ಅದನ್ನು ದುಷ್ಟಾಂತಲಂಕಾರ ಎನ್ನುವರು.
ಉದಾಹರಣೆಗೆ– ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ. ಉಪಮೇಯ– ಮಾತು ಬಲ್ಲವನಿಗೆ ಜಗಳವಿಲ್ಲ.
ಉಪಮಾನ– ಊಟ ಬಲ್ಲವನಿಗೆ ರೋಗವಿಲ್ಲ.
ಸಮನ್ವಯ– ಇಲ್ಲಿ ಮಾತು ಬಲ್ಲವನಿಗೆ ಜಗಳವಿಲ್ಲ ಹಾಗೂ ಊಟ ಬಲ್ಲವನಿಗೆ ರೋಗವಿಲ್ಲ ಎಂಬ ಎರಡು ವಾಕ್ಯವು ಒಂದರ ಪ್ರತಿಬಿಂಬ ಮತ್ತೊಂದು ಎಂದು ಪ್ರತಿಪಾದಿತವಾಗಿದೆ ಆದ್ದರಿಂದ ಇದು ದೃಷ್ಟಾಂತ ಅಲಂಕಾರ. ಲಕ್ಷಣ– ಎರಡು ಬೇರೆ ಬೇರೆ ವಾಕ್ಯಗಳು ಅರ್ಥ ಸಾದೃಶ್ಯದಿಂದ ಒಂದರ ಪ್ರತಿಬಿಂಬ ಮತ್ತೊಂದು ಎಂದು ತೋರುವಂತಿದ್ದರೆ ಅದು ದೃಷ್ಟಾಂತ ಅಲಂಕಾರ. ಅಲಂಕಾರ– ದುಷ್ಟಾಂತಲಂಕಾರ.

**4. ಉತ್ಪ್ರೇಕ್ಷಾಲಂಕಾರ ಎಂದರೇನು? ಉದಾಹರಣೆ ಕೊಡಿ.**
ಉಪಮೇಯವನ್ನು ಉಪಮಾನವನ್ನಾಗಿ ಸಂಭಾವಿಸಿ ಅಂದರೆ ಕಲ್ಪಿಸಿ ವರ್ಣಿಸಿದರೆ ಅದು ಉತ್ಪ್ರೇಕ್ಷ ಲಂಕಾರ ಎನಿಸುವುದು.
ಉದಾ– ಅಚ್ಛೋದ ಸರೋವರವು ತ್ರೈಲೋಕ್ಯ ಲಕ್ಷ್ಮಿಯು ನನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಶೋಭಿಸಿತು.
ಉಪಮೇಯ– ಅಚ್ಛೋದ ಸರೋವರ.
ಉಪಮಾನ– ರನ್ನಗನ್ನಡಿ
ಸಮನ್ವಯ– ಉಪಮೇಯವಾದ ಅಚ್ಛೋದ ಸರೋವರವನ್ನು ಉಪಮಾನವಾದ ರನ್ನಗನ್ನಡಿ ಎಂಬುದಾಗಿ ಸಂಭಾವಿಸಿ( ಕಲ್ಪಿಸಿ) ವರ್ಣಿಸ ಲಾಗಿದೆ.
ಲಕ್ಷಣ– ಉಪಮೇಯವನ್ನು ಉಪಮಾನವನ್ನಾಗಿ ಸಂಭಾವಿಸಿ ಅಂದರೆ ಕಲ್ಪಿಸಿ ವರ್ಣಿಸಿದರೆ ಅದು ಉಪೇಕ್ಷಾಲಂಕಾರ.
ಅಲಂಕಾರ– ಉತ್ಪ್ರೇಕ್ಷಾ ಅಲಂಕಾರ.

ಮಾರ್ಗದರ್ಶಿ ಶಿಕ್ಷಕರು : ಶ್ರೀ ಮಧು. ಕೆ. ಕನ್ನಡ ಭಾಷಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ ಸೂಲದಹಳ್ಳಿ, ಕೂಡ್ಲಿಗಿ (ತಾ)

ಸಾಯಿಮಣಿ ಪ್ರಕಾಶನ, ಹೊಸಪೇಟೆ

ಹಂಪಿ ಟೈಮ್ಸ್
HAMPI TIMES
ಮಂಗಳವಾರ/Tuesday 04.02.2025
ವಿಜಯನಗರ



Greetings
Ads Starts from Rs.1000
94486 33038

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಚಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us

# ಶ್ರೀ ವೆಂಕಟೇಶ್ವರ ಸ್ವಾಮಿ ರಥೋತ್ಸವ

## ಆಂಜನೇಯ ಸ್ವಾಮಿ ಪಾದಗಟ್ಟಿವರೆಗೆ ರಥೋತ್ಸವ | ಮಾರುತಿ ಗರಡಿ ಬಳಗದವರಿಂದ ಸನ್ನೆ



**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಪಟ್ಟಣದ ರಾಮನಗರದ ಶ್ರೀಲಕ್ಷ್ಮೀ ವೆಂಕಟೇಶ್ವರ ದೇವಾಲಯದಲ್ಲಿ ರಥೋತ್ಸವ ನಿಮಿತ್ತ ಶ್ರೀಸ್ವಾಮಿಗೆ ಪ್ರಧಾನ ಅರ್ಚಕ ಬದರಿನಾರಾಯಣ ವಿಶೇಷ ಪೂಜೆ ಸಲ್ಲಿಸಿದರು. ಬೆಳಿಗ್ಗೆಯಿಂದ ಭಕ್ತರು ಸರತಿಸಾಲಿನಲ್ಲಿ ನಿಂತು ವಿಶೇಷ ಪೂಜೆ ದರ್ಶನ ಪಡೆದರು. ಸಂಜೆ ಶ್ರೀ ವೆಂಕಟೇಶ್ವರ ರಥೋತ್ಸವ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಆಂಜನೇಯ ಸ್ವಾಮಿ ಪಾದಗಟ್ಟಿವರೆಗೆ ರಥೋತ್ಸವ ವಿಜೃಂಭಣೆ ಯಿಂದ ಜರುಗಿತು.

ಹಬೊಹಳ್ಳಿ ಸುತ್ತಮುತ್ತಲಿನ ಚಿಂತ್ರಪಳ್ಳಿ, ವಲ್ಲಬಾಪುರ, ಬಂಡಿಹಳ್ಳಿ, ಕೆಚ್ಚಿನಬಂಡಿ, ನಾರಾಯಣದೇವರಕೆರೆ ಸೇರಿದಂತೆ ಜಿಲ್ಲೆಯ ವಿವಿಧೆಡೆಗಳಿಂದ ಭಕ್ತರು ಆಗಮಿಸಿದ್ದರು. ರಾಮನಗರ ಮಾರುತಿ ಗರಡಿ ಬಳಗದವರು ಸನ್ನೆ ಹಾಕಿದರು. ಪಾದಗಟ್ಟಿಯಿಂದ ರಥ ಹಿಂತಿರುಗುತ್ತಿದ್ದ ವೇಳೆ ತಾಂತ್ರಿಕ ದೋಷದಿಂದಾಗಿ 20ಕ್ಕೂ ಹೆಚ್ಚು ನಿಮಿಷಗಳಷ್ಟು ಕಾಲ ರಥ ಸ್ಥಗಿತಗೊಂಡಿತ್ತು. ಸರಿಪಡಿಸಿದ ನಂತರ ರಥ ಪುನಃ ಸುಗಮವಾಗಿ ಸಾಗಿತು. ಡಿವೈಎಸ್ಪಿ ಮಲ್ಲೇಶ್ ಮಲ್ಲಾಪುರ, ಸಿಪಿಐ ವಿಕಾಸ್ ಪಿ.ಲಮಾಣಿ, ಪಿಎಸ್‌ಐ ಬಸವರಾಜ ಅಡವಿಬಾವಿ ಮತ್ತು ತಂಡ ಭದ್ರತೆ ಒದಗಿಸಿತ್ತು.

ಜಾತ್ರೆ ನಿಮಿತ್ತ ಪುರಸಭೆಯಿಂದ ಮೂರು ದಿನಗಳ ಕಾಲ ಭಕ್ತರಿಗೆ ಮಜ್ಜಿಗೆ ಮತ್ತು ನೀರು ವಿತರಣೆ ಆರವಟ್ಟಿಗೆ ಆರಂಭಿಸಿತ್ತು. ಪುರಸಭೆ ಅಧ್ಯಕ್ಷ ಎಂ.ಮರಿರಾಮಣ್ಣ ಮಜ್ಜಿಗೆ ವಿತರಣೆಗೆ ಚಾಲನೆ ನೀಡಿದರು. ತಾ.ಪಂ.ಮಾಜಿ ಸದಸ್ಯ ಚಿಂತ್ರಪಳ್ಳಿ ದೇವೇಂದ್ರಪ್ಪ, ಉಮಾಪತಿ, ಡಿಶ್ ಮಂಜುನಾಥ ಇತರರಿದ್ದರು.

# ಗ್ಯಾರಂಟಿ ಯೋಜನೆ ಸದುಪಯೋಗ ಪಡೆದುಕೊಳ್ಳಿ

## ತಾಲ್ಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಶಾಸಕ ಬಿ.ಎಂ.ನಾಗರಾಜ ಹೇಳಿಕೆ



**ಹಂಪಿ ಟೈಮ್ಸ್ ಸಿರುಗುಪ್ಪ**

ರಾಜ್ಯ ಸರ್ಕಾರದ ಪ್ರಮುಖ ಗ್ಯಾರಂಟಿ ಯೋಜನೆಗಳನ್ನು ಸಾರ್ವಜನಿಕರು ಸದುಪಯೋಗ ಪಡೆದುಕೊಳ್ಳಬೇಕು ಎಂದು ಸಿರುಗುಪ್ಪ ಶಾಸಕ ಬಿ.ಎಂ.ನಾಗರಾಜ ಅವರು ಹೇಳಿದರು.

ಸಿರುಗುಪ್ಪ ತಾಲ್ಲೂಕು ಪಂಚಾಯತ್‌ವತಿಯಿಂದ ಸಿರುಗುಪ್ಪ ಪಟ್ಟಣದ ತಾಲ್ಲೂಕು ಪಂಚಾಯಿತಿಯ ಸಾಮರ್ಥ್ಯ ಸೌಧದಲ್ಲಿ ಸೋಮವಾರ ಆಯೋಜಿಸಿದ್ದ ತಾಲ್ಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನೆ ಸಭೆ ಉದ್ಘಾಟಿಸಿ ಅವರು ಮಾತನಾಡಿದರು. ತಾಲ್ಲೂಕಿನಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸದಸ್ಯರುಗಳು ಸಹ ಗ್ಯಾರಂಟಿ ಯೋಜನೆಗಳ ಬಗ್ಗೆ ತಮ್ಮ-ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ವ್ಯಾಪಕ ಪ್ರಚಾರ ಕೈಗೊಳ್ಳಬೇಕು ಎಂದು ಅವರು ತಿಳಿಸಿದರು.

ಆಧಾರ್ ಕಾರ್ಡ್, ರೇಷನ್ ಕಾರ್ಡ್ ಮತ್ತು ಜಿಎಸ್‌ಟಿ ಇತರೆ ತಾಂತ್ರಿಕ ತೊಂದರೆಗಳಿಂದ ವಂಚಿತರಾಗಿರುವ ಅರ್ಹ ಫಲಾನುಭವಿಗಳನ್ನು ಗ್ಯಾರಂಟಿ ಯೋಜನಾ ಸಮಿತಿ ಸದಸ್ಯರುಗಳು ತಮ್ಮ ಕ್ಷೇತ್ರದಲ್ಲಿ ಗುರುತಿಸಿ ಯೋಜನೆಯ ಸೌಲಭ್ಯವನ್ನು ಒದಗಿಸಲು ಕಾರ್ಯ ಪ್ರವೃತರಾಗಬೇಕು ಎಂದು ನಿರ್ದೇಶನ ನೀಡಿದರು.

ಬಳಿಕ ಶಾಸಕರು ಅನ್ನಭಾಗ್ಯ, ಗೃಹ ಲಕ್ಷ್ಮಿ, ಗೃಹ ಜ್ಯೋತಿ, ಶಕ್ತಿ ಯೋಜನೆ ಮತ್ತು ಯುವನಿಧಿ ಸೇರಿದಂತೆ ಐದು ಗ್ಯಾರಂಟಿ ಯೋಜನೆಯ ಸದುಪಯೋಗ ಪಡೆದುಕೊಂಡ ಫಲಾನುಭವಿಗಳ ಅಂಕಿ-ಸಂಖ್ಯೆಗಳ ಮಾಹಿತಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಕೆ.ಇ.ಚಿದಾನಂದಪ್ಪ ಮಾತನಾಡಿ, ಪಂಚ ಗ್ಯಾರಂಟಿ ಯೋಜನೆ ಗಳನ್ನು ಹಳ್ಳಿ ಮಟ್ಟದಲ್ಲಿಯೂ ತಲುಪಿಸುವಂತಾಗಲು ಹಾಗೂ ಫಲಾನುಭವಿಗಳು ವಂಚಿತರಾಗದಂತೆ ನೋಡಿಕೊಳ್ಳಬೇಕು. ಈ ಕುರಿತು ಸಾಕಷ್ಟು ಪ್ರಚಾರ ನೀಡಬೇಕು ಎಂದು ಅವರು ತಿಳಿಸಿದರು.

ಸಭೆಯಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸಿರುಗುಪ್ಪ ತಾಲ್ಲೂಕು ಅಧ್ಯಕ್ಷ ಮಾರುತಿ ರೆಡ್ಡಿ ವರಪ್ರಸಾದ್, ಉಪಾಧ್ಯಕ್ಷ ಕರಿಬಸಪ್ಪ, ಸದಸ್ಯರುಗಳಾದ ಎಸ್.ಎಂ. ನಾಗರಾಜ ಸ್ವಾಮಿ, ಪಾಲಾಕ್ಷಗೌಡ, ವೆಂಕಟರೆಡ್ಡಿ, ಚನ್ನಬಸವ, ಕೆ.ವೀರೇಶ್ ನಾಯ್ಕ್, ಜಿ.ಬಸವನಗೌಡ, ಬಿ.ಎಂ.ಅಪ್ಪಾಜಿ ನಾಯಕ, ಬಿ.ಕೆ.ಹಸೇನ್, ಡಿ.ದಾನೇಶ್ವರಿ, ಅಗ್ರಹಾರ ಗೋವಿಂದ, ಎಸ್.ಶ್ಯಾಂ ಸುಂದರ್, ಬಿ.ದೊಡ್ಡ ಪರಮೇಶ್ವರಪ್ಪ, ಸಿರುಗುಪ್ಪ ತಾಪಾಂ ಇಓ ಪವನ ಕುಮಾರ್ ಎಸ್ ದಂಡಪ್ಪನವರ, ಗ್ರೇಡ್-2 ತಹಶೀಲ್ದಾರರಾದ ಸತ್ಯಮ್ಮ ಸೇರಿದಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿಗಳು, ಉದ್ಯೋಗ ವಿನಿಮಯ ಕೇಂದ್ರ, ಜೆಸ್ಕಾಂ, ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆ, ಸಿರುಗುಪ್ಪ ವಿಭಾಗ ಸಿಬ್ಬಂದಿ, ಆಹಾರ ಶಿರಸ್ತೇದಾರರು ಸೇರಿದಂತೆ ತಾಲ್ಲೂಕು ಪಂಚಾಯಿತಿ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಮೈಕ್ರೋ ನ್ಯೂಸ್

### ಫೆ.04 ರಂದು ವಿಶ್ವ ಕ್ಯಾನ್ಸರ್ ದಿನಾಚರಣೆ ಜನಜಾಗೃತಿ ಜಾಥ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ವಿಶ್ವ ಕ್ಯಾನ್ಸರ್ ದಿನಾಚರಣೆ ಅಂಗವಾಗಿ ಫೆ.04 ರಂದು ಬೆಳಿಗ್ಗೆ 09.30 ಗಂಟೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ಆವರಣದಲ್ಲಿ ಜನಜಾಗೃತಿ ಜಾಥ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ಚಾಲನೆ ನೀಡುವರು.

**ಮಾರ್ಗ:** ಜಾಥಾವು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಯಿಂದ ಆರಂಭಗೊಂಡು ಸಂಗಂ ವೃತ್ತ, ಜಿಲ್ಲಾಧಿಕಾರಿಗಳ ಕಚೇರಿ ಮಾರ್ಗವಾಗಿ ಮರಳಿ ಗಡಿಗಿ ಚೆನ್ನಪ್ಪ ವೃತ್ತ ಮೂಲಕ ಪುನಃ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ಆವರಣಕ್ಕೆ ತಲುಪಲಿದೆ ಎಂದು ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಮರಿಯಂಬಿ ವಿ.ಕೆ ತಿಳಿಸಿದ್ದಾರೆ.

### ಫೆ.05 ರಾಜ್ಯಮಟ್ಟದ ಬುಡಕಟ್ಟು ಉತ್ಸವದ ಪೂರ್ವಭಾವಿ ಸಭೆ

**ಹಂಪಿ ಟೈಮ್ಸ್ ಬಳ್ಳಾರಿ**

ಪರಿಶಿಷ್ಟ ಪಂಗಡ ಉಪಯೋಜನೆಯಡಿ ರಾಜ್ಯಮಟ್ಟದ ಬುಡಕಟ್ಟು ಉತ್ಸವವನ್ನು ಬಳ್ಳಾರಿ ಜಿಲ್ಲೆಯಲ್ಲಿ ಆಯೋಜಿಸುವ ಕುರಿತು ಚರ್ಚಿಸಲು ಫೆ.05 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಏರ್ಪಡಿಸಲಾಗಿದೆ.

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಅಧ್ಯಕ್ಷತೆ ವಹಿಸುವರು. ವಿವಿಧ ಇಲಾಖೆಗಳ ಅಧಿಕಾರಿಗಳು ತಪ್ಪದೇ ಸಭೆಗೆ ಹಾಜರಾಗಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಅವರು ತಿಳಿಸಿದ್ದಾರೆ.

# ಗರ್ಭಿಣಿ ಅವಧಿಯಲ್ಲಿ ಸತತ ಪಾದಗಳ ಬಾವು ನಿರ್ಲಕ್ಷ್ಯಿಸಿಸಬೇಡಿ

## ಡಿಎಚ್‌ಓ ಡಾ.ಯಲ್ಲಾ ರಮೇಶ ಸಲಹೆ



**ಹಂಪಿ ಟೈಮ್ಸ್ ಬಳ್ಳಾರಿ**

ಗರ್ಭಿಣಿ ಎಂದು ತಿಳಿದ ಕೂಡಲೆ ಉಚಿತವಾಗಿ ತಾಯಿಕಾರ್ಡ್‌ನಲ್ಲಿ ನೋಂದಣಿ ಮಾಡಿಸುವ ಜೊತೆಗೆ ರಕ್ತದೊತ್ತಡ ಚಿನ್ಹೆಯಾಗಿರುವ ಪಾದಗಳ ಬಾವುನ್ನು ನಿರ್ಲಕ್ಷಿಸಿಸಬೇಡಿ;ವೈದ್ಯರ ಸಲಹೆಯಂತೆ ಔಷದೋಪಚಾರ ಪಡೆದು ಆಹಾರದಲ್ಲಿ ಬದಲಾವಣೆ ಮೂಲಕ ಗರ್ಭಿಣಿಯರ ಆರೈಕೆಗೆ ಬೆಂಬಲ ನೀಡಿ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ಯಲ್ಲಾ ರಮೇಶ ಬಾಬು ಪಾಲಕರಲ್ಲಿ ವಿನಂತಿಸಿದರು.

ಸೋಮವಾರದಂದು ಎಮ್ಮಿಗನೂರು ಗ್ರಾಮದಲ್ಲಿ ಗರ್ಭಿಣಿ ತಾಯಿಯ ಮನೆ ಭೇಟಿ ಮಾಡಿ ಪಾಲಕರೊಂದಿಗೆ ಮಾತನಾಡುತ್ತಾ, ರಕ್ತದೊತ್ತಡವಲ್ಲದೆ ಚೊಚ್ಚಲು ಗರ್ಭಿಣಿ, ಎತ್ತರ ಕಡಿಮೆ, ದೇಹದ ರಕ್ತದಲ್ಲಿ ಕಬ್ಬಿಣಾಂಶ ಕೊರತೆ, ಅವಳಿಜವಳಿ ಗರ್ಭಣಿ, ವಿವಾಹವಾಗಿ ಐದಕ್ಕಿಂತ ಹೆಚ್ಚು ವರ್ಷಗಳ ನಂತರ ಗರ್ಭಿಣಿಯಾಗಿರುವುದು, ಮೊದಲ ಹೆರಿಗೆ ಸಿಸೇರಿಯನ್, ಮುಂತಾದ ಕಾರಣಗಳಿದ್ದರೂ ಸಹ ಗಂಡಾಂತರಕಾರಿ ಗರ್ಭಿಣಿಯರಾಗುತ್ತಾರೆ, ದಯವಿಟ್ಟು ನಿರ್ಲಕ್ಷಿಸಿಸಬೇಡಿ ಎಂದು ವಿನಂತಿಸಿದರು.

**ರಕ್ತಹೀನತೆ ನಿವಾರಣೆಗೆ ಕ್ರಮ:**

ತೀವ್ರ ರಕ್ತಹೀನತೆಯಂತಹ ಸನ್ನಿವೇಶದಲ್ಲಿ ಸ್ಥಳೀಯವಾಗಿ ನೀಡುವ ಚಿಕಿತ್ಸೆಯಾದ ಕನಿಷ್ಟ 180 ಕಬ್ಬಿಣಾಂಶ ಮಾತ್ರೆಗಳ ಸೇವನೆ, ವೈದ್ಯರ ಸಲಹೆ ಮೇರೆಗೆ ಐರನ್ ಸುಕ್ರೋಸ್ ಚುಚ್ಚುಮದ್ದು, ಅಗತ್ಯವಿದ್ದರೆ ರಕ್ತ ಹಾಕಿಸುವಿಕೆಯನ್ನು ಸಹ ಮಾಡಲಾಗುವುದು. ಈ ಹಂತದಲ್ಲೂ ಸುಧಾರಣೆಯಾಗದಿದ್ದಲ್ಲಿ ಪ್ರಸೂತಿ ತಜ್ಞರ ಬಳಿ ಖುದ್ದಾಗಿ ಕರೆದು ಕೊಂಡು ಹೋಗಲು ಸಿಬ್ಬಂದಿಯವರಿಗೆ ಸೂಚಿಸಿದರು. ಅಗತ್ಯವಿದ್ದಲ್ಲಿ ಸ್ಕ್ಯಾನ್ ಮಾಡಿಸಬೇಕು.

**ಮಕ್ಕಳ ಜನನದ ಅಂತರಕ್ಕಾಗಿ ತಾತ್ಕಾಲಿಕ ವಿಧಾನ ಬಳಕೆ:**

ಮೊದಲ ಹೆರಿಗೆ ಶಸ್ತ್ರಚಿಕಿತ್ಸೆ ಮೂಲಕವಾದಲ್ಲಿ ಪುನಃ ಗರ್ಭಿಣಿಯಾಗುವ ಅವಧಿಯನ್ನು ಕನಿಷ್ಟ 3 ವರ್ಷಕ್ಕೆ ಕಡ್ಡಾಯವಾಗಿ ಮುಂದುಡುವುದು, ಇದಕ್ಕಾಗಿ ಅಂತರ ಚುಚ್ಚುಮದ್ದು, ಕಾಪರ-ಟಿ, ನೀರೊಧ ಬಳಸಲು ವಿನಂತಿಸಿದರು.

ಭೇಟಿಯ ವೇಳೆ ತಾಲೂಕು ಆರೋಗ್ಯಾಧಿಕಾರಿ ಡಾ.ಅರುಣ್ ಕುಮಾರ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಡಿಎನ್‌ಓ ಗಿರೀಶ್, ಹಿರಿಯ ಆರೋಗ್ಯ ನೀರಿಕ್ಷಣಾಧಿಕಾರಿ ಬಸವರಾಜ್, ಸಿಬ್ಬಂದಿಯವರಾದ, ಬಸನಗೌಡ, ವಿಘ್ನೇಶ, ಕೃಷ್ಣಮೂರ್ತಿ ಸೇರಿದಂತೆ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳಾದ ಗೀತಾ, ಪೂಜಾ, ನಂದಾ, ಸಿಹೆಚ್‌ಓ ಸುಧಾ, ಆಶಾ ಕಾರ್ಯಕರ್ತೆಯರು ಇದ್ದರು.

# ಸಹಕಾರ ಸಂಘಗಳ ಇಲಾಖೆ ನಿಯಮ ಉಲ್ಲಂಘಿಸಿದಲ್ಲಿ ದೂರು ನೀಡಿ

**ಹಂಪಿ ಟೈಮ್ಸ್ ಬಳ್ಳಾರಿ**

ಕರ್ನಾಟಕ ಲೇವಾದೇವಿದಾರರ ಅಧಿನಿಯಮ 1961 ಕಲಂ 28(1) ರನ್ವಯ ಹಾಗೂ ಸರ್ಕಾರದ ಅಧಿಸೂಚನೆಯಂತೆ ಭದ್ರತೆ ಸಾಲಗಳಿಗೆ ಗರಿಷ್ಠ ವಾರ್ಷಿಕ ಬಡ್ಡಿ ಶೇ.14 ಹಾಗೂ ಭದ್ರತೆ ಇಲ್ಲದೇ ಇರುವ ಸಾಲಗಳಿಗೆ ಗರಿಷ್ಠ ವಾರ್ಷಿಕ ಬಡ್ಡಿ ಶೇ.16 ರಷ್ಟು ಮಾತ್ರ ವಿಧಿಸಲು ಅವಕಾಶವಿದೆ. ನಿಯಮ ಉಲ್ಲಂಘಿಸಿದಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸಿ ದೂರು ನೀಡಬಹುದು ಎಂದು ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು ತಿಳಿಸಿದ್ದಾರೆ.

ಕಲಬುರಗಿಯ ಕಲಬುರಗಿ ಪ್ರಾಂತದ ಸಹಕಾರ ಸಂಘಗಳ ಜಂಟಿ ನಿಬಂಧಕರ ದೂ.08472-221753, ಬಳ್ಳಾರಿ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರ ದೂ.08392-272635 ಹಾಗೂ ಬಳ್ಳಾರಿ ಉಪವಿಭಾಗದ ಸಹಕಾರ ಸಂಘಗಳ ಸಹಾಯ ನಿಬಂಧಕರ ದೂ.08392-272002 ಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

# ರೂ.53.82 ಲಕ್ಷ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ



**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರಾದ ಎನ್.ತಿಪ್ಪೇಸ್ವಾಮಿ ಅವರು ಸೋಮವಾರ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿನ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಕಚೇರಿಯ ಮುಂಭಾಗ ನೂತನವಾಗಿ ನಿರ್ಮಿಸಲಾಗುತ್ತಿರುವ ಗ್ರಾಹಕರ ಮಧ್ಯಸ್ಥಿಕೆ ಕೇಂದ್ರ ಮತ್ತು ಕಚೇರಿಯ ಮೊದಲನೇ ಮಹಡಿ ಕಟ್ಟಡ ನಿರ್ಮಾಣ ಸೇರಿದಂತೆ ಒಟ್ಟು ರೂ.53.82 ಲಕ್ಷ ವೆಚ್ಚದ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿದರು.

ಈ ವೇಳೆ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಮಹಿಳಾ ಸದಸ್ಯರಾದ ಶಶಿಕಲಾ ಮಾಲ್ಗಾ, ಹಿರಿಯ ವಕೀಲರಾದ ಹೆಚ್.ಎಂ. ಅಂಕಲಯ್ಯ, ಬಿ.ವೆಂಕಟೇಶ್ವರ ಪ್ರಸಾದ್, ಮಲ್ಲಿಕಾರ್ಜುನ, ಪಿ.ಸತ್ಯ ನಾರಾಯಣ ಸೇರಿದಂತೆ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಮತ್ತು ಭೂಸೇನಾ ನಿಗಮದ ಸಿಬ್ಬಂದಿಗಳು ಇದ್ದರು.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
BOOK YOUR ADS REACH MORE READERS
HAMPI TIMES
PRINT & DIGITAL
DAILY NEWS PAPER
BOOK NOW
94486 33038
Email: hampitimes@gmail.com

Book All Types of legal /Public Notice Display Ads
IN NEWSPAPER @ AFFORDABLE PRICE
Property Purchase Notice - Lost & Found Notice -
Summons Notice - Tender/E-Tender Notice - E-Auction Notice Etc..